ಕನ್ನಡಪ್ರಭ
ಶನಿವಾರ 9.05.2026

ಗರಿಷ್ಠ 37°c | ಕನಿಷ್ಠ 26°c

ಸುದ್ದಿ ಸಿಂಚನ

ಚೀಟಿ ಹಣ ₹50 ಲಕ್ಷ ಬಡ್ಡಿ ಸಮೇತ ಪಾವತಿಗೆ ಸೂಚನೆ

ದಾವಣಗೆರೆ: ಚೀಟಿ ಅವಧಿ ಮುಕ್ತಾಯವಾದರೂ ಹಣ ಮರುಪಾವತಿಸದೇ ಸೇವಾ ನ್ಯೂನತೆ ಎಸಗಿದ ಜಿಲ್ಲೆಯ ಚನ್ನಗಿರಿಯ ನಿತ್ಯೋತ್ಸವ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಭಾರಿ ದಂಡ ವಿಧಿಸಿದೆ. ಚನ್ನಗಿರಿಯ ಜಬೀನ್ ಖಾನಂ ನಿತ್ಯೋತ್ಸವ ಸಂಸ್ಥೆಯಲ್ಲಿ ₹50 ಲಕ್ಷ ಮೊತ್ತದ ಚೀಟಿಗೆ ಮಾಸಿಕ ₹2 ಲಕ್ಷದಂತೆ 25 ಕಂತುಗಳನ್ನು ಪಾವತಿಸಿದ್ದರು. ಚೀಟಿ ಮುಕ್ತಾಯ ನಂತರ ಹಣ ನೀಡದ ಸಂಸ್ಥೆ ವಿರುದ್ಧ ಗ್ರಾಹಕ ಆಯೋಗದ ಮೊರೆಹೋಗಿದ್ದರು. ಪ್ರಕರಣ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಎಚ್.ಎನ್.ಮೀನಾ ಹಾಗೂ ಸದಸ್ಯ ಸಿ.ಎಸ್. ತ್ಯಾಗರಾಜನ್, ದೂರುದಾರರಿಗೆ ₹50 ಲಕ್ಷ ಅಸಲು ಹಣ ಶೇ.9ರಷ್ಟು ವಾರ್ಷಿಕ ಬಡ್ಡಿಯೊಂದಿಗೆ ಮರುಪಾವತಿಸುವಂತೆ ಆದೇಶಿಸಿದ್ದಾರೆ. ಜೊತೆಗೆ ಮಾನಸಿಕ ಯಾತನೆ ಮತ್ತು ದೂರು ವೆಚ್ಚಕ್ಕಾಗಿ ₹35,000 ಪರಿಹಾರ 1 ತಿಂಗಳೊಳಗೆ ಪಾವತಿಸುವಂತೆ ಸಂಸ್ಥೆ ಮುಖ್ಯ ವ್ಯವಸ್ಥಾಪಕರಿಗೆ ಸೂಚನೆ ನೀಡಿದ್ದಾರೆ ಎಂದು ಆಯೋಗದ ಸಹಾಯಕ ರಿಜಿಸ್ಟ್ರಾರ್ ಹಾಗೂ ಸಹಾಯಕ ಆಡಳಿತಾಧಿಕಾರಿ ತಿಳಿಸಿದ್ದಾರೆ.

ನಾಳೆ ಗುರುವಂದನೆ

ಮಲೇಬೆನ್ನೂರು: ಇಲ್ಲಿಗೆ ಸಮೀಪದ ಕುಂಬಳೂರಿನ 1980 ರಿಂದ 2000ನೇ ಸಾಲಿನ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪಿಯು ಕಾಲೇಜು ಹಳೇ ವಿದ್ಯಾರ್ಥಿಗಳ ವತಿಯಿಂದ ಮೇ 10ರಂದು ಬೆಳಗ್ಗೆ 10.30 ಗಂಟೆಗೆ ಸರ್ಕಾರಿ ಪಿಯು ಕಾಲೇಜು ಆವರಣದಲ್ಲಿ ಗುರುವಂದನೆ, ಸ್ನೇಹ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹಳೇ ವಿದ್ಯಾರ್ಥಿ ಕೆ.ಜಿ. ಚಂದ್ರಶೇಖರ ಗೌಡ ತಿಳಿಸಿದರು. ಪಟ್ಟಣದ ನೀರಾವರಿ ಇಲಾಖೆ ಆವರಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 35ಕ್ಕೂ ಹೆಚ್ಚು ಬೋಧಕರು ಲಭ್ಯವಾಗಿದ್ದಾರೆ. ನಿಟ್ಟೂರು, ಆದಾಪುರ, ಕುಂಬಳೂರು, ವಿನಾಯಕ ನಗರ, ಭಾಸ್ಕರ್ ರಾವ್ ಕ್ಯಾಂಪ್, ಜಿಗಳಿ, ನಂದಿತಾವರೆ ಜಿ.ಬೇವಿನಹಳ್ಳಿ ಮತ್ತು ಯಲವಟ್ಟಿ ಗ್ರಾಮಗಳ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ ಎಂದರು. ಜಿಗಳಿ ರಮೇಶ್ ಮಾತನಾಡಿ, ಹಳೇ ವಿದ್ಯಾರ್ಥಿಗಳಿಂದ ಬಡಮಕ್ಕಳನ್ನು ಗುರುತಿಸಿ ನೆರವು ನೀಡಲು ಸಹ ಚಿಂತನೆ ನಡೆಸಿದ್ದೇವೆ. ಈ ಕಾರ್ಯಕ್ಕೆ ಕುಂಬಳೂರು ಗ್ರಾಮಸ್ಥರು ಸಹಕಾರ ನೀಡಿದ್ದಾರೆ ಎಂದರು. ಕೆ.ಜಿ. ಲಿಂಗರಾಜ್, ಜಿ.ಬಿ ಗುರು ಪ್ರಸನ್ನ, ಎನ್ಎಲ್ ಪ್ರಕಾಶ್, ಎಂ ಶರಣ್, ಧನಂಜಯ್, ರಮೇಶ್, ತೀರ್ಥಪ್ಪ ಮತ್ತಿತರರಿದ್ದರು.

ಆರ್ಥಿಕ ಸೌಲಭ್ಯ ಪಡೆಯಲು ಅರ್ಜಿಗಳ ಆಹ್ವಾನ

ದಾವಣಗೆರೆ: ಜಿಲ್ಲೆಯ ಜವಳಿ ಉತ್ಪನ್ನಗಳನ್ನು ಉತ್ಪಾದಿಸುವ ಸಣ್ಣ ಉದ್ಯಮಿಗಳಿಗೆ ಆರ್ಥಿಕ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ಜವಳಿ ಉತ್ಪನ್ನಗಳನ್ನು ಉತ್ಪಾದಿಸುವ ಉದ್ಯಮಿಗಳಿಗೆ ತಮ್ಮ ಉತ್ಪನ್ನಗಳ ಶ್ರೇಷ್ಠತೆ, ಗುಣ ಮಟ್ಟ ಇತರೆ ಪ್ರಮಾಣ ಪತ್ರ ಪಡೆಯಲು ಮಾಡಿರುವ ವೆಚ್ಚದ ಮೇಲೆ ₹50,000 ವರೆಗೆ ಮರುಪಾವತಿ ಪಡೆಯಲು ಹಾಗೂ ತಮ್ಮ ಉತ್ಪನ್ನಗಳ ಪ್ಯಾಕೇಜಿಂಗ್ ವಿನ್ಯಾಸಗೊಳಿಸಲು ವೆಚ್ಚದ ಮೇಲೆ ₹50,000 ವರೆಗೆ ಮರುಪಾವತಿ ಪಡೆಯಲು RAMP ಯೋಜನೆಯ ಬ್ರಾಂಡ್ ಕರ್ನಾಟಕ ಕಾರ್ಯಕ್ರಮದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅರ್ಜಿದಾರರು ಉಪ ನಿರ್ದೇಶಕರ ಕಚೇರಿ. ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ರಾಮಾಂಜನೇಯ ಪ್ಲಾಜಾ, ಕಾಲೇಜ್ ರಸ್ತೆ, ನಿಟ್ಟುವಳ್ಳಿ ದಾವಣಗೆರೆ-577004 ದೂ: 08192-262362 ಇಲ್ಲಿಗೆ ಸಂಪರ್ಕಿಸಬಹುದೆಂದು ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಇಂದು ಬಾಪೂಜಿ ಹೈಟೆಕ್ ಶಿಕ್ಷಣ ಸಂಸ್ಥೆ ವಾರ್ಷಿಕೋತ್ಸವ

ದಾವಣಗೆರೆ: ನಗರದ ಎಸ್.ಎಸ್. ಬಡಾವಣೆಯಲ್ಲಿರುವ ಬಾಪೂಜಿ ಹೈಟೆಕ್ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭ ಮತ್ತು ಸಾಂಪ್ರದಾಯಿಕ ದಿನವನ್ನು ಮೇ 9ರ ಇಂದು ಕಾಲೇಜಿನ ಆವರಣದಲ್ಲಿರುವ ಬಯಲು ರಂಗಮಂದಿರದಲ್ಲಿ ಜರುಗಲಿದೆ. ಬೆಳಗ್ಗೆ 10 ಕ್ಕೆ ಸಾಂಪ್ರದಾಯಿಕ ದಿನ ನಡೆಯಲಿದ್ದು, ಸಂಜೆ 6ಕ್ಕೆ ಜರುಗುವ ವಾರ್ಷಿಕೋತ್ಸವ ಸಮಾರಂಭದಲ್ಲಿ ಡಯಮ್ಸ್ ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಬಾತಿ ಬಸವರಾಜ, ಬಾಪೂಜಿ ಹೈಟೆಕ್ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಬಿ. ವೀರಪ್ಪ ಭಾಗವಹಿಸಲಿದ್ದಾರೆ.



ಚನ್ನಗಿರಿ ತಾಲೂಕು ಮರಬನಹಳ್ಳಿಯ ಸಮೀಪ ಸರ್ಕಾರಿ ಬಸ್ ಅಪಘಾತಕ್ಕೊಗಿ ಗಾಯಗೊಂಡವರು ದಾವಣಗೆರೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಜಿಲ್ಲಾಧಿಕಾರಿ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಎಲ್ಲ ಗಾಯಾಳುಗಳಿಗೂ ಸೂಕ್ತ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ತಾಕೀತು ಮಾಡಿದರು.



ದಾವಣಗೆರೆ ನಗರದ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಂದಿರ ಆವರಣದಲ್ಲಿ ಇತ್ತೀಚೆಗೆ ಎಸ್ಎಸ್ ಕೇರ್ ಟ್ರಸ್ಟ್ ಹಾಗೂ ದಾವಣಗೆರೆ ವಿವಿ ಸಹಯೋಗದ ಉಚಿತ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ''ಸಂಕಲ್ಪ''ಕ್ಕೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದರು. ಸಂಕಲ್ಪ ಕೇಂದ್ರದ ಸಿಬ್ಬಂದಿ ಹಾಜರಿದ್ದರು.

ಕನಕ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ: ಸೂಚನೆ

ಹರಿಹರ: ನಗರದ ಶ್ರೀ ಕನಕ ನೌಕರರ ಸಂಘ ವತಿಯಿಂದ ಹಮ್ಮಿಕೊಂಡಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಕುರುಬ ಸಮಾಜದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2025-26ನೇ ಸಾಲಿನ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಹರಿಹರ ತಾಲೂಕಿನ ಕುರುಬ ಸಮಾಜದ ವಿದ್ಯಾರ್ಥಿಗಳು ಮೇ 25ರೊಳಗಾಗಿ ದೃಢೀಕೃತ ಅಂಕಪಟ್ಟಿಯ ಜೆರಾಕ್ಸ್ ಪ್ರತಿ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಹಾಗೂ ಇತ್ತೀಚಿನ 2 ಭಾವಚಿತ್ರಗಳೊಂದಿಗೆ ಹರಿಹರದ ಶ್ರೀ ಕಾಳಿದಾಸ ವಿದ್ಯಾಸಂಸ್ಥೆ ಆವರಣದಲ್ಲಿರುವ ಸಂಘದ ಕಚೇರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೆ.ಎಚ್. ನಿಜಲಿಂಗಪ್ಪ-7829271286, ರಾಮಪ್ಪ ಸೋಮಣ್ಣೇರ-9945718979, ಡಿ.ಕೆ. ಕರಿಬಸಪ್ಪ-9919077658 ಹಾಗೂ ಎಸ್.ಜೆ. ಶೇಖರಪ್ಪ-8310248876 ಅವರನ್ನು ಸಂಪರ್ಕಿಸಬಹುದು.

ಸಿಎಂ ಕುರ್ಚಿ ಗೊಂದಲ ಬಗೆಹರಿಸಲಿ: ಜಾರಕಿಹೊಳಿ

ಕಾಂಗ್ರೆಸ್ಸಿನಲ್ಲಿ ಗೊಂದಲ ಇರುವುದು ನಿಜ | ಶೀಘ್ರವೇ ದೆಹಲಿಯಲ್ಲಿ ಪಕ್ಷದ ಸಭೆ | ಸಿಎಂ ಸ್ಥಾನಕ್ಕೆ ಖರ್ಗೆ ಹೆಸರು ನನಗೆ ಗೊತ್ತಿಲ್ಲ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಗೊಂದಲ ಇದ್ದು, ವಿಚಾರದ ಬಗ್ಗೆ ನಾನು ಉತ್ತರ ಕೊಡುವುದಿಲ್ಲ. ಆದಷ್ಟು ಬೇಗನೆ ಇಂತಹ ಗೊಂದಲ ಬಗೆಹರಿಸಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ಪಕ್ಷದ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ.

ನಗರದಲ್ಲಿ ತಮ್ಮ ಆಪ್ತರ ಕುಟುಂಬದ ಮದುವೆಗೆ ಆಗಮಿಸಿದ್ದ ವೇಳೆ ಬಾಪೂಜಿ ಹೆಲಿಪ್ಯಾಡ್‌ನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಹೈಕಮಾಂಡ್ ಬಯಸಿದರೆ ಐದು ವರ್ಷ ತಾವೇ ಸಿಎಂ ಎಂಬುದಾಗಿ ಸಿದ್ದರಾಮಯ್ಯ ಹೇಳಿದ್ದು, ಅದು ಸಿಎಂಗೆ ಸಂಬಂಧಿಸಿದ್ದು. ಸಿಎಂ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡಲು ಆಗಲ್ಲ ಎಂದರು.

ಪಕ್ಷದಲ್ಲಿ ಗೊಂದಲ ಇರುವುದು ನಿಜ. ಶೀಘ್ರವೇ ದೆಹಲಿಯಲ್ಲಿ ಸಭೆ ಇದೆ. ಗೊಂದಲ ಬಗೆಹರಿಸಬೇಕು ಎಂಬುದು ನಮ್ಮ ಮನವಿಯಾಗಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೋ, ಇಲ್ಲವೋ ನಮಗೆ ಗೊತ್ತಿಲ್ಲ. ಆದರೆ, ಗೊಂದಲ ಮೊದಲು ಬಗೆಹರಿಸಬೇಕಾಗಿದೆ. ಮುಖ್ಯಮಂತ್ರಿ ಕುರ್ಚಿ ವಿಚಾರದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೆಸರು ಮುನ್ನೆಲೆಗೆ ಬಂದ ವಿಚಾರ ತಮಗೆ ಗೊತ್ತಿಲ್ಲ ಎಂದು ತಿಳಿಸಿದರು.

ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವಂತೆ ಕೆಲವರು ಆಗ್ರಹಿಸುತ್ತಿದ್ದಾರೆ. ಅದೆಲ್ಲಾ ಹೈಕಮಾಂಡ್‌ಗೆ ಬಿಟ್ಟ ವಿಚಾರ. ನಮ್ಮ ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ. ಕಾದು ನೋಡೋಣ. ಯಾರಿಗೆ ಯಾವ ಸ್ಥಾನ ನೀಡಬೇಕೆಂಬುದನ್ನು ವರಿಷ್ಠರು ಸೂಕ್ತ ಸಮಯದಲ್ಲಿ ತೀರ್ಮಾನ ಮಾಡುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

ಚಿತ್ರದುರ್ಗದಲ್ಲಿ ಮೇ 9ಕ್ಕೆ ಯಡಿಯೂರಪ್ಪ ಅಭಿನಂದನೋತ್ಸವ ಮಾಡುತ್ತಿದ್ದು, ಯಡಿಯೂರಪ್ಪ



ದಾವಣಗೆರೆಗೆ ಶುಕ್ರವಾರ ಆಗಮಿಸಿದ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಎಂಬಿಎ ಹೆಲಿಪ್ಯಾಡ್‌ನಲ್ಲಿ ಮಹಾನಗರ ಪಾಲಿಕೆಯ ಮಾಜಿ ಸದಸ್ಯೆ, ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಸುಧಾ ಇಟ್ಟಿಗುಡಿ ಮಂಜುನಾಥ ಭೇಟಿ ಮಾಡಿದರು. ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ.ವೀರಣ್ಣ, ಎಂ.ಎಂ. ಆಂಜನೇಯ ಗುರೂಜಿ ಇತರರು ಇದ್ದರು.

ಅವರಿಗೆ ಒಳ್ಳೆಯದಾಗಲಿ. ಬಿಎಸ್‌ವೈ ಹೋರಾಟಗಾರರು. ಬಹಳ ಕೆಳ ಹಂತದಿಂದ ಇಲ್ಲಿವರೆಗೆ ಬಂದಿದ್ದಾರೆ. ರಾಜಕೀಯವೇ ಬೇರೆ, ಪಕ್ಷಗಳೇ ಬೇರೆ. ಆದರೆ, ವೈಯಕ್ತಿಕವಾಗಿ ಒಬ್ಬ ಹೋರಾಟಗಾರನಾಗಿ ಇಷ್ಟೆಲ್ಲಾ ಬೆಳೆದಿರುವ ಯಡಿಯೂರಪ್ಪನವರಿಗೆ ನಾನು ಅಭಿನಂದಿಸುತ್ತೇನೆ. ಇದೇ ಯಡಿಯೂರಪ್ಪನವರು ತಮ್ಮ ಪಕ್ಷದಲ್ಲಿರುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಸಲಹೆ ನೀಡುವೆ ಎಂದು ತಿಳಿಸಿದರು.

ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದರು. ಆಗ ಕೆಳಗೆ ಇಳಿಸಿದ್ದವರೇ ಉತ್ಸವ ಮಾಡಲು ಹೊರಟಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಹ ಹುಷಾರಾಗಿ ಹೆಜ್ಜೆ ಇಟ್ಟರೆ ಯಶಸ್ವಿಯಾಗುತ್ತಾರೆ. ಇನ್ನಾದರೂ ವಿಜಯೇಂದ್ರ ಸ್ವಲ್ಪ ಜಾಗ್ರತೆ ವಹಿಸಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ಜಾರಕಿಹೊಳಿ ಸಲಹೆ ನೀಡಿದರು.

ತಮಿಳುನಾಡು ರಾಜ್ಯಪಾಲರು ಸಾಕಷ್ಟು ಕೆಟ್ಟ ಸಂಪ್ರದಾಯಕ್ಕೆ ಮುಂದಾಗಿದ್ದಾರೆ. ಯಾರು ಹೆಚ್ಚು ಬಹುಮತ ಹೊಂದಿದ್ದಾರೋ ಅಂತಹವರಿಗೆ ಸರ್ಕಾರ ರಚಿಸಲು ಅವಕಾಶ ಮಾಡಿಕೊಡಬೇಕು. ಆದರೆ, ಒಳಗಡೆ ಬಹುಮತ ತೋರಿಸದೇ ಸರ್ಕಾರ ಬಿದ್ದು ಹೋಗುತ್ತದೆ. ಹೆಚ್ಚು ಸ್ಥಾನ ಗೆದ್ದವರಿಗೆ ಸರ್ಕಾರ ರಚಿಸಲು ಅವಕಾಶ ಮಾಡಿಕೊಡಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ತಮಿಳುನಾಡು ರಾಜ್ಯಪಾಲರಿಗೆ ಒತ್ತಾಯಿಸಿದರು.

ವಾಲ್ಮೀಕಿ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ ವೀರಣ್ಣ, ಮಾನವಬಂಧುತ್ವವೇದಿಕೆ ರಾಜ್ಯ ಸಂಚಾಲಕ ಪ್ರೊ. ಎ.ಬಿ.ರಾಮಚಂದ್ರಪ್ಪ, ಶ್ಯಾಗಲೆ ಕೆ.ಆರ್. ಮಂಜುನಾಥ, ಹಿರಿಯ ವಕೀಲ ಎನ್.ಎಂ. ಆಂಜನೇಯ ಗುರೂಜಿ ಇತರರು ಇದ್ದರು.

ದಕ್ಷಿಣ ಬಿಜೆಪಿ ಮತ ನಮಗೆ, ನಮ್ಮ ಮತ ಬಿಜೆಪಿ ಪಾಲಾಗಿವೆ: ಸಚಿವ

ಶಿಗ್ಗಾಂವಿ ಫಾರ್ಮುಲಾ ರಾಜ್ಯವ್ಯಾಪಿ ತಂದರೆ ಕಾಂಗ್ರೆಸ್ ಬಲಿಷ್ಠ

ದಾವಣಗೆರೆ: ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ನಮ್ಮ ಮತ ಬಿಜೆಪಿ ಹೋದರೆ, ಬಿಜೆಪಿ ಮತಗಳು ನಮಗೆ ಬಂದಿವೆ ಎಂದು ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ನಗರದ ಬಾಪೂಜಿ ಎಂಬಿಎ ಕಾಲೇಜು ಹೆಲಿಪ್ಯಾಡ್‌ನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡೂ ಉಪ ಚುನಾವಣೆಯಲ್ಲಿ ನಮ್ಮ ಸರ್ಕಾರದ ಗ್ಯಾರಂಟಿಗಳು ಹಾಗೂ ಮತದಾರರು ನಮ್ಮ ಕೈ ಹಿಡಿದಿದ್ದಾರೆ ಎಂದರು.

ಉಪ ಚುನಾವಣೆ ಫಲಿತಾಂಶವು ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇರುವುದನ್ನು ಸಾಬೀತು ಪಡಿಸಿದೆ. ಶಿಗ್ಗಾಂವ್‌ನಲ್ಲಿ ಯಾವ ರೀತಿ ಅಹಿಂದ ಫಾರ್ಮುಲ ವರ್ಕೌಟ್ ಆಯಿತೋ, ಅದೇ ಫಾರ್ಮುಲಾ ಬಾಗಲಕೋಟೆಯಲ್ಲಿ ನಿರೀಕ್ಷೆಗೂ ಮೀರಿ ಅದು ಉಪಯೋಗಕ್ಕೆ ಬಂದಿತು. ಇದೇ ಫಾರ್ಮುಲಾವನ್ನು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಎಲ್ಲ ಕಡೆ ಅಪ್ಲೈ ಮಾಡಿದರೆ ಕಾಂಗ್ರೆಸ್ ಪಕ್ಷ ಮತ್ತಷ್ಟು ಗಟ್ಟಿಯಾಗುತ್ತದೆ ಎಂದು ತಿಳಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ನಮ್ಮ ಒಳ ಜಗಳದಿಂದ ಲೀಡ್ ಕಡಿಮೆಯಾಗಿದ್ದು, ಇದು ದಾವಣಗೆರೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ಎಸ್‌ಡಿಪಿಐ ಹಾಗೂ ಬೇರೆ ಬೇರೆ ಫ್ಯಾಕ್ಟರ್‌ಗಳನ್ನು ಗಮನಿಸಬೇಕಾದ ಅವಶ್ಯಕತೆ ಇದೆ. ನಮ್ಮ ಮತಗಳು ಇಲ್ಲಿ ಬಿಜೆಪಿಗೆ ಹೋಗಿದ್ದರೆ, ಬಿಜೆಪಿ ಮತಗಳು ನಮಗೆ ಬಂದಿವೆ. ಎರಡೂ ಪ್ರಯೋಗವಾಗಿವೆ. ಕಾಂಗ್ರೆಸ್ ಸರ್ಕಾರ ಉಪ ಚುನಾವಣೆಯಲ್ಲಿ ಆಡಳಿತ ಯಂತ್ರ ದುರ್ಬಳಕೆ ಮಾಡಿಕೊಂಡಿದೆ ಎಂಬ ಆರೋಪ ಸುಳ್ಳು ಎಂದು ಪ್ರತಿಕ್ರಿಯಿಸಿದರು.

ಹಣ, ಹೆಂಡದ ಹೊಳೆ ಹರಿಸಿದ್ದಾರೆಂಬ ವಿಪಕ್ಷದವರ ಆರೋಪದಲ್ಲಿ ಯಾವುದೇ ಸತ್ಯಾಂಶವಿಲ್ಲ. ವಿಪಕ್ಷಗಳು ಆರೋಪ ಮಾಡಿದಂತೆ ಯಾವುದೇ ಅಕ್ರಮಗಳು ಉಪ ಚುನಾವಣೆಯಲ್ಲಿ ಆಗಿಲ್ಲ. ಈಗ ಎಲ್ಲವೂ ಮುಗಿದು ಹೋಗಿದೆ. ಫಲಿತಾಂಶವೂ ಬಂದಾಗಿದೆ. ಈಗ ಮತ್ತೆ ಅದರ ಬಗ್ಗೆ ಚರ್ಚೆ ಅನಾವಶ್ಯಕ. ಕ್ಷೇತ್ರದಲ್ಲಿ ಎಲ್ಲಾ ರೀತಿಯ ಮತದಾರರು ಇರುತ್ತಾರೆ. ಅದನ್ನೆಲ್ಲಾ ನಾವು ಬ್ಯಾಲೆನ್ಸ್ ಮಾಡಬೇಕು ಎಂದು ಜಾರಕಿ ಹೊಳಿ ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಪ್ರತಿಭೆ ಗುರುತಿಸಲು ಕ್ರೀಡೆ ಸಹಕಾರಿ: ಚಂದ್ರಣ್ಣ

ಹೆಮ್ಮನ ಬೇತೂರಲ್ಲಿ ಕ್ರಿಕೆಟ್ ಪಂದ್ಯಾವಳಿ ವಿಜೇತ ತಂಡಗಳಿಗೆ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ, ಭಾಗವಹಿಸುವ ಮನೋಭಾವವೇ ಮುಖ್ಯವಾಗಿದೆ. ಗ್ರಾಮೀಣ ಮಟ್ಟದಲ್ಲಿ ನಡೆಯುವ ಕ್ರೀಡಾಕೂಟಗಳು ಯುವ ಪ್ರತಿಭೆಗಳನ್ನು ಗುರುತಿಸಲು ಪ್ರಮುಖ ವೇದಿಕೆಯಂತೆ ಸಹಕಾರಿಯಾಗುತ್ತವೆ ಎಂದು ಮಾಜಿ ಎಪಿಎಂಸಿ ಅಧ್ಯಕ್ಷ ಎಸ್.ಕೆ.ಚಂದ್ರಣ್ಣ ಹೇಳಿದರು.

ತಾಲೂಕಿನ ಹೆಮ್ಮನ ಬೇತೂರು ಗ್ರಾಮದಲ್ಲಿ 2 ದಿನಗಳ ಕಾಲ ನಡೆದ ಪ್ರೀಮಿಯಂ ಲೀಗ್ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ವಿಜೇತ ತಂಡಗಳಿಗೆ ಪ್ರಶಸ್ತಿ ವಿತರಿಸಿ ಅವರು ಮಾತನಾಡಿದರು. ಪತ್ರಕರ್ತ ಚಿದಾನಂದ ಜಿ.ಎಸ್. ಮಾತನಾಡಿ ಕ್ರಿಕೆಟ್ ಕ್ರೀಡಾಕೂಟಗಳು ಯುವ ಜನತೆಯನ್ನು ದುಷ್ಟ ವೃತ್ತಿಗಳಿಂದ ದೂರ ವಿಟ್ಟು, ಆರೋಗ್ಯಕರ ಬದುಕಿನತ್ತ ಕೊಂಡೊಯ್ಯುತ್ತವೆ. ಅಡಕೆ ನಾಡು ಎಂದೇ ಪ್ರಸಿದ್ಧಿ ಪಡೆದಿರುವ ಹೆಮ್ಮನ ಬೇತೂರಿನ ಗ್ರಾಮಸ್ಥರಾದ ಮಲ್ಲಿಕಾರ್ಜುನ್, ತಿಪ್ಪೇಸ್ವಾಮಿ, ಬಸವರಾಜು, ಶಿವಕುಮಾರ್, ಪ್ರಕಾಶ್, ಎಸ್.ಕೆ.ಚಂದ್ರಣ್ಣ, ಬಿ.ಎಂ.ಶಿವುಕುಮಾರ್, ಸೇರಿದಂತೆ ಗ್ರಾಮದ ಅನೇಕ ಮುಖಂಡರುಗಳು ಕ್ರೀಡೆಗೆ ಉತ್ತೇಜನ ನೀಡುವ ಮೂಲಕ ಸ್ಫೂರ್ತಿ ನೀಡುತ್ತಿರುವುದು ಶ್ಲಾಘನೀಯ ಎಂದರು.



ಹೆಮ್ಮನ ಬೇತೂರಲ್ಲಿ ನಡೆದ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಪ್ರಥಮ ಸ್ಥಾನ ಪಡೆದ ಪವರ್‌ಹಿಟ್ಟರ್ಸ್ ತಂಡಕ್ಕೆ ಗಣ್ಯರು ಕಪ್ ಹಾಗೂ ಪ್ರಶಸ್ತಿ ವಿತರಿಸಿ, ಅಭಿನಂದಿಸಿದರು.

ಟೂರ್ನಮೆಂಟ್‌ನಲ್ಲಿ ಪವರ್‌ಹಿಟ್ಟರ್ಸ್ ತಂಡ ಪ್ರಥಮ ಸ್ಥಾನ ಪಡೆದುಕೊಂಡಿದ್ದು, ರಾಯಲ್ ಇಂಡಿಯನ್ಸ್ ತಂಡ ದ್ವಿತೀಯ ಸ್ಥಾನ ಹಾಗೂ ಭೀಮ್ ಆರ್ಮಿ ತಂಡ ತೃತೀಯ ಸ್ಥಾನ ಗಳಿಸಿತು. ವೈಯಕ್ತಿಕ ಪ್ರಶಸ್ತಿ ಗಳಲ್ಲಿ ದರ್ಶನ್ ಸರಣಿ ಶ್ರೇಷ್ಠ ಬ್ಯಾಟ್ಸ್‌ಮನ್ ಆಗಿ ಹೊರಹೊಮ್ಮಿದರೆ, ರಮೇಶ್ ಶರಣಿ ಶ್ರೇಷ್ಠ ಬೌಲರ್ ಪ್ರಶಸ್ತಿಗೆ ಭಾಜನರಾದರು.

ಗ್ರಾಮದ ಮುಖಂಡರಾದ ಎಸ್.ಎಂ ಮಲ್ಲಿಕಾರ್ಜುನ್, ಎಸ್.ಎಸ್ ತಿಪ್ಪೇಸ್ವಾಮಿ, ಶ್ರೀ ಸಿದ್ದೇಶ್ವರ ದೇವಸ್ಥಾನ ಸಮಿತಿಯ ಧರ್ಮದರ್ಶಿ ಗೌಡ್ರು ಬಸವರಾಜ, ಜಿ.ಟಿ ಶಿವಕುಮಾರ್, ಗ್ರಾಮ ಪಂಚಾಯತಿ ಮಾಜಿ ಸದಸ್ಯರಾದ ಎಸ್.ಆರ್ ಪ್ರಕಾಶ್, ಬಿ.ಎಂ. ಶಿವಕುಮಾರ್, ಜಿಎಸ್, ಕಲ್ಲೇಶ್ವರಪ್ಪ, ಎಸ್.ಕೆ ರಾಜಶೇಖರ್, ಬಿ.ಎಂ ಶಿವಕುಮಾರ, ಯು.ಎಂ ಅಜ್ಜಯ್ಯ, ಶಿಖರಪ್ಪ, ಸೇರಿದಂತೆ ಕ್ರಿಕೆಟ್‌ನಲ್ಲಿ ಭಾಗವಹಿಸಿದ ಎಲ್ಲಾ ತಂಡಗಳು ಮುಖ್ಯಸ್ಥರು, ತಂಡದ ಆಟಗಾರರು ಇದ್ದರು.

ಅಥಣಿ ಸಂಯುಕ್ತ ಪ.ಪೂ. ಕಾಲೇಜು, ವಿದ್ವತ್ ಅಕಾಡೆಮಿಗೆ 1, 3ನೇ ರ್‍ಯಾಂಕ್- ಅಭಿನಂದನೆ

ದಾವಣಗೆರೆ : 2026ನೇ ಸಾಲಿನಲ್ಲಿ ನಡೆದ ರಾಷ್ಟ್ರಮಟ್ಟದ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಬಿ-ಪ್ಲ್ಯಾನಿಂಗ್, ಬಿ-ಆರ್ಕಿಟೆಕ್ಟ್ ವಿಭಾಗಗಳಲ್ಲಿ ನಗರದ ಎಸ್.ಎಸ್.ಬಡಾವಣೆಯ ಅಥಣಿ ಸಂಯುಕ್ತ ಪದವಿಪೂರ್ವ ಕಾಲೇಜು ಮತ್ತು ವಿದ್ವತ್ ಮೆಡಿಕಲ್ ಮತ್ತು ಐಐಟಿ ಅಕಾಡೆಮಿಯ ವಿದ್ಯಾರ್ಥಿ ಆರ್.ಚೇತನ್ ಬಿ-ಪ್ಲ್ಯಾನಿಂಗ್‌ನಲ್ಲಿ 1ನೇ ರ್‍ಯಾಂಕ್ ಮತ್ತು ಬಿ-ಆರ್ಕಿಟೆಕ್ಟ್‌ನಲ್ಲಿ 3ನೇ ರ್‍ಯಾಂಕ್ ಗಳಿಸಿದ್ದಾರೆ.

ಕಾರ್ತಿಕ್ ರಾಮಗಿರಿ ಬಿ-ಪ್ಲ್ಯಾನಿಂಗ್‌ನಲ್ಲಿ 36ನೇ ರ್‍ಯಾಂಕ್ ಮತ್ತು ಬಿ-ಆರ್ಕಿಟೆಕ್ಟ್ ನಲ್ಲಿ 56ನೇ ರ್‍ಯಾಂಕ್, ಎನ್.ಬಿ.ಕಾವ್ಯ ಬಿ-ಪ್ಲ್ಯಾನಿಂಗ್‌ನಲ್ಲಿ 693ನೇ ರ್‍ಯಾಂಕ್ ಮತ್ತು ಬಿ-ಆರ್ಕಿಟೆಕ್ಟ್ ನಲ್ಲಿ 693ನೇ ರ್‍ಯಾಂಕ್, ಎಸ್.ಎಂ. ವರ್ಷಿಣಿ ಬಿ-ಪ್ಲ್ಯಾನಿಂಗ್ ನಲ್ಲಿ 1098ನೇ ರ್‍ಯಾಂಕ್ ಮತ್ತು ಬಿ-ಆರ್ಕಿಟೆಕ್ಟ್‌ನಲ್ಲಿ 1610ನೇ ರ್‍ಯಾಂ ಪಡೆದಿದ್ದಾರೆ.

ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ ಆಲ್ ಇಂಡಿಯಾ ರ್‍ಯಾಂಕ್ 100 ಒಳಗೆ 02, 1000 ಒಳಗೆ 03, 2000 ಒಳಗೆ 14, 3000 ಒಳಗೆ 41, 4000 ಒಳಗೆ 53, 5000 ಒಳಗೆ 54 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿದ್ವತ್ ಅಕಾಡೆಮಿ ಮ್ಯಾನೇಜಿಂಗ್ ಟ್ರಸ್ಟಿ ಬಿ.ಎಸ್. ಅರುಣ್ ಕುಮಾರ, ಟ್ರಸ್ಟಿ ಡಿ.ಎಸ್. ಸುನೀತಾ, ಉಪನ್ಯಾಸಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.



- 2026ನೇ ಸಾಲಿನ ರಾಷ್ಟ್ರಮಟ್ಟದ ಜೆಇಇ ಮೇನ್ಸ್ ಪರೀಕ್ಷೆ.
- ಚೇತನ್ ಬಿ-ಪ್ಲ್ಯಾನಿಂಗ್‌ನಲ್ಲಿ 1ನೇ, ಬಿ-ಆರ್ಕಿಟೆಕ್ಟ್‌ನಲ್ಲಿ 3ನೇ ರ್‍ಯಾಂಕ್.

ಸ್ವಯಂಪ್ರೇರಿತ ರಕ್ತದಾನಿಗಳು ಜೀವ ರಕ್ಷಕರು: ಡಾ.ವರದೇಂದ್ರ ಕುಲಕರ್ಣಿ

ರೆಡ್ ಕ್ರಾಸ್ ದಿನಾಚರಣೆ | ರಕ್ತದಾನ ಜಾಗೃತಿ ಕಾರ್ಯಕ್ರಮ



ದಾವಣಗೆರೆಯ ಮಾಸಬ ಕಾಲೇಜಿನಲ್ಲಿ ನಡೆದ ರೆಡ್ ಕ್ರಾಸ್ ದಿನ ಕಾರ್ಯಕ್ರಮವನ್ನು ಡಾ.ವರದೇಂದ್ರ ಕುಲಕರ್ಣಿ ಉದ್ಘಾಟಿಸಿದರು.

ದಾವಣಗೆರೆ: ಪ್ರತಿ ವರ್ಷ ಮೇ 8 ರಂದು ವಿಶ್ವಾದ್ಯಂತ ರೆಡ್‌ಕ್ರಾಸ್ ದಿನವನ್ನು ಆಚರಿಸಲಾಗುತ್ತದೆ. ಈ ದಿನವನ್ನು ರೆಡ್‌ಕ್ರಾಸ್ ಸಂಸ್ಥೆಯ ಸ್ಥಾಪಕ ಹೆನ್ರಿ ಡುನಾಂಟ್ ಜನ್ಮದಿನ ಅಂಗವಾಗಿ ಆಚರಿಸುವುದು ವಿಶೇಷ. ಮಾನವೀಯ ಸೇವೆ, ಪರೋಪಕಾರ ಮತ್ತು ರಕ್ತದಾನದ ಮಹತ್ವವನ್ನು ಜನರಿಗೆ ತಿಳಿಸುವುದು ಈ ದಿನದ ಪ್ರಮುಖ ಉದ್ದೇಶ ಎಂದು ಸಂಪನ್ಮೂಲ ವ್ಯಕ್ತಿ ಜೆಜೆಎಂ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಡಾ.ವರದೇಂದ್ರ ಕುಲಕರ್ಣಿ ಹೇಳಿದರು.

ನಗರದ ಮಾಸಬ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿಶ್ವ ರೆಡ್ ಕ್ರಾಸ್ ದಿನಾಚರಣೆ ಹಾಗೂ ರಕ್ತದಾನದ ಅರಿವು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಕ್ತದಾನವು ಜೀವ ರಕ್ಷಿಸುವ ಅತ್ಯುತ್ತಮ ಕಾರ್ಯ. ರಕ್ತದಾನ ಮಾಡುವುದರಿಂದ ಮೂರು ಜೀವಗಳನ್ನು ಉಳಿಸಬಹುದು. ಸಮಾಜದಲ್ಲಿ ಹಲವಾರು ರೋಗಿಗಳಿಗೆ ತುರ್ತು ಪರಿಸ್ಥಿತಿಯಲ್ಲಿ ಅಂದರೆ ಅಪಘಾತ ಮತ್ತು ಹೆರಿಗೆ ಸಂದರ್ಭ ಹೆಚ್ಚು ರಕ್ತಸ್ರಾವ ಆಗುತ್ತದೆ. ಹೀಗಾಗಿ ರಕ್ತದ ಅವಶ್ಯಕತೆ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಸ್ವಯಂಪ್ರೇರಿತ ರಕ್ತದಾನಿಗಳು ಜೀವರಕ್ಷಕರಾಗುತ್ತಾರೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯೆ ಪ್ರೊ. ಜೆ.ಅನಿತಾಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ರಕ್ತದಾನ ಮಾಡುವ ಮುನ್ನ ನಂತರ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ಮತ್ತು ರಕ್ತದಾನದ ಅಗತ್ಯತೆ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಎಸ್ಎಸ್ ಕೇರ್‌ಟ್ರಸ್ಟಿನ ನೋಡಲ್ ಅಧಿಕಾರಿ ಡಾ. ಜಿ.ಧನ್ಯಕುಮಾರ, ಡಾ. ಗೋವರ್ಧನ್, ಡಾ.ದಿವ್ಯ, ಡಾ. ಎ.ಬಿ. ವಿಜಯಕುಮಾರ, ಪ್ರೊ. ಕೆ.ವೈ.ಈಶ್ವರ, ಧನಂಜಯ, ಡಾ.ಓ. ಪ್ರವೀಣ್‌ಕುಮಾರ, ಡಾ. ಆರ್.ರಾಘವೇಂದ್ರ, ನಯನ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬದುಕು-ಬವಣೆ | 29.17 ಎಕರೆ ಜಾಗದಲ್ಲಿನ ಮರಗಳಿಗೆ ಮಾರ್ಕ್ | ಸುಂಕದಕಟ್ಟೆ ಗ್ರಾಮಸ್ಥರಿಂದ ವಿರೋಧ

ನಿವೇಶನ: ಮಲ್ಲದೇವರಕಟ್ಟೆ ಬಳಿ ಅಧಿಕಾರಿಗಳಿಂದ ಸರ್ವೇ

• **ಕನ್ನಡ ಪ್ರಭ ವಾರ್ತೆ** ಹೊನ್ನಾಳಿ

ಪಟ್ಟಣದ ಪುರಸಭೆ ವ್ಯಾಪ್ತಿಯ ನಿವೇಶನರಹಿತರಿಗೆ ವಸತಿ ಕಲ್ಪಿಸಿಕೊಡುವ ಸಲುವಾಗಿ ತಾಲೂಕಿನ ಸುಂಕದಕಟ್ಟೆ ಸಮೀಪದ ಮಲ್ಲದೇವರಕಟ್ಟೆ ಪ್ರದೇಶದಲ್ಲಿ ಗುರುವಾರ ಮತ್ತು ಶುಕ್ರವಾರ ಉಪವಿಭಾಗಾಧಿಕಾರಿ ಎಚ್.ಬಿ. ಚನ್ನಪ್ಪ ನೇತೃತ್ವದಲ್ಲಿ ಕಂದಾಯ, ಅರಣ್ಯ ಹಾಗೂ ಪುರಸಭೆ ಅಧಿಕಾರಿಗಳ ತಂಡ ಈ ಪ್ರದೇಶದಲ್ಲಿನ ಮರಗಳ ಸರ್ವೆ ಹಾಗೂ ಮರಗಳ ಮಾರ್ಕ್ ಮಾಡುವ ಕಾರ್ಯ ನಡೆಸಿದರು.

ಈ ಸಂದರ್ಭ ಉಪವಿಭಾಗಾಧಿಕಾರಿ ಎಚ್.ಬಿ. ಚನ್ನಪ್ಪ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಈ ಭಾಗದ ಸರ್ವೆ ನಂ.4ರ ಸುಮಾರು 29.17 ಎಕರೆ ಪ್ರದೇಶದಲ್ಲಿ ವಸತಿರಹಿತರಿಗೆ ನಿವೇಶ ನೀಡುವ ಉದ್ದೇಶವಿದೆ. ಇದಕ್ಕಾಗಿ ಯಾವ ಯಾವ ಜಾತಿಯ ಎಷ್ಟೆಷ್ಟು ಮರಗಳಿವೆ ಎಂದು ಸರ್ವೆ ಮಾಡಿ ಮಾರ್ಕ್ ಮಾಡಲಾಗುವುದು. ಅನಂತರ ಅರಣ್ಯ ಇಲಾಖೆ ಸಹಕಾರದಿಂದ ಅವುಗಳನ್ನು ತೆರವು ಗೊಳಿಸಿ ನಿವೇಶಗಳನ್ನು ಮಾಡಲಾಗುವುದು ಎಂದರು.



ಮಲ್ಲದೇವರ ಕಟ್ಟೆಯ ಸರ್ಕಾರಿ ಜಮೀನಲ್ಲಿ ನಿವೇಶನರಹಿತರಿಗೆ ವಸತಿ ಕಲ್ಪಿಸುವ ಉದ್ದೇಶದಿಂದ ಅಧಿಕಾರಿಗಳ ತಂಡ ಮರಗಳ ಸರ್ವೇ ಕಾರ್ಯ ನಡೆಸಿತು. ಎಸಿ ಚನ್ನಪ್ಪ ಎಚ್.ಬಿ., ತಹಸೀಲ್ದಾರ್ ರಾಜೇಶ್ ಕುಮಾರ್, ಪುರುಸಭೆ ಮುಖ್ಯಾಧಿಕಾರಿ ಲೀಲಾವತಿ, ಇತರರು ಇದ್ದರು.

ಈಗಾಗಲೇ ನಿವೇಶನರಹಿತರಿಗೆ ವಸತಿ ಕಲ್ಪಿಸಿಕೊಡಲು ಮಂಜೂರಾದ ಈ ಪ್ರದೇಶದಲ್ಲಿ ಬಡಾವಣೆ ನಿರ್ಮಾಣಕ್ಕಾಗಿ ಸರ್ಕಾರದಿಂದ ₹20 ಲಕ್ಷ ಅನುದಾನ ಬಿಡುಗಡೆಯಾಗಿದೆ. ಈ ಹಣದಲ್ಲಿ ಚರಂಡಿ, ರಸ್ತೆ, ನಿರ್ಮಾಣ ಮಾಡಲಾಗುವುದು ಎಂದು ಉಪವಿಭಾಗಾಧಿಕಾರಿ ಸ್ಪಷ್ಟಪಡಿಸಿದರು.

ಪುರಸಭೆ ಮುಖ್ಯಾಧಿಕಾರಿ ಟಿ.ಲೀಲಾವತಿ ಮಾತನಾಡಿ, ಮಲ್ಲದೇವರ ಕಟ್ಟೆ ಪ್ರದೇಶದ 29.17 ಎಕರೆಯಲ್ಲಿ 20/30 ಅಡಿ ಅಳತೆಯ ನಿವೇಶನ ಗುರುತು ಮಾಡಲಾಗುವುದು. ಅರ್ಹ ಫಲಾನುಭವಿಗಳನ್ನು ಮಾತ್ರ ಗುರುತಿಸಿ ಯಾವುದೇ ಪ್ರಭಾವಕ್ಕೆ ಒಳಗಾಗದೇ ನಿವೇಶನ ಹಂಚಿಕೆ ಮಾಡಲಾಗುವುದು. ಈಗಾಗಲೇ ಅನೇಕರಿಂದ ಅರ್ಜಿಗಳು ಬಂದಿದ್ದು, ಹೊಸದಾಗಿ ಅರ್ಜಿ ಕರೆಯುವ ಬಗ್ಗೆ ಶಾಸಕರೊಂದಿಗೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಸುಂಕದಕಟ್ಟೆ ಜನತೆ ವಿರೋಧ: ನಿವೇಶನ ರಹಿತರಿಗೆ ವಸತಿ ಕಲ್ಪಿಸಿಕೊಡುವ ಉದ್ದೇಶದಿಂದ ಮಲ್ಲದೇವರ ಕಟ್ಟೆಯ ಈ ಪ್ರದೇಶ ವಶಕ್ಕೆ ಪಡೆಯುವ ಸಂದರ್ಭದಿಂದಲೂ ಸುಂಕದಕಟ್ಟೆ ಗ್ರಾಮದ ಜನತೆ, ರೈತರು, ತೀವ್ರ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದರು. ಗುರುವಾರ ಮತ್ತು ಶುಕ್ರವಾರ ಸಹ ಅಧಿಕಾರಿಗಳು ಈ ಪ್ರದೇಶದಲ್ಲಿ ಮರಗಳ ಸಮೀಕ್ಷೆ ನಡೆಸುತ್ತಿರುವ ವೇಳೆ ಗ್ರಾಮದ ರೈತ ಮುಖಂಡ ಕರಿಬಸಪ್ಪ, ಅರಬಗಟ್ಟೆ ಗ್ರಾ.ಪಂ. ಮಾಜಿ ಅಧ್ಯಕ್ಷ ಎಸ್.ಆರ್. ಮಂಜುನಾಥ್, ನರಸಿಂಹ ಮೂರ್ತಿ, ಹಾಗೂ ನರಸಿಂಹಪ್ಪ ವಿರೋಧ ವ್ಯಕ್ತಪಡಿಸಿದರು.

ಇದು ಅನಾದಿ ಕಾಲದಿಂದಲೂ ಗ್ರಾಮದ ಜಾನುವಾರುಗಳಿಗೆ ಮೀಸಲಿಟ್ಟ ಜಾಗವಾಗಿದೆ. ಈ ಜಾಗದಲ್ಲಿ ಸಾವಿರಾರು ನವಿಲುಗಳು ಸೇರಿದಂತೆ ಅನೇಕ ವನ್ಯಜೀವಿಗಳು ವಾಸ ಮಾಡುತ್ತಿವೆ. ಉತ್ತಮ ಜಾತಿಯ ಮರ-ಗಿಡಗಳು ಇವೆ. ಇದ್ಯಾವುದನ್ನು ಪರಿಗಣಿಸದೇ ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣಿದು ಈ ಜಾಗದಲ್ಲಿ ನಿವೇಶನ ರಹಿತರಿಗೆ ವಸತಿ ಕಲ್ಪಿಸಲು ಮುಂದಾಗಿದ್ದಾರೆ ಎಂದು ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಉಪವಿಭಾಗಾಧಿಕಾರಿ ಚನ್ನಪ್ಪ, ಸರ್ಕಾರದ ಆದೇಶ ನಾವು ಪಾಲಿಸುತ್ತಿದ್ದೇವೆ ಎಂದಷ್ಟೇ ಹೇಳಿದರು.

ಮರಗಳ ಸರ್ವೆ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರಾಜೇಶ್ ಕುಮಾರ್, ಅರಣ್ಯ ಇಲಾಖೆಯ ಕಿಶೋರ್ ನಾಯ್ಕ, ಸಹಾಯಕ ಸರ್ವೆ ಅಧಿಕಾರಿ ಮಲ್ಲಿಕಾರ್ಜುನ್, ತಾಲೂಕು ಸರ್ವೆಯರ್ ರಮೇಶ್, ಪುರಸಭೆ ಎಂಜಿನಿಯರ್ ದೇವರಾಜ್, ಶಿವಣ್ಣ, ರಾಜಸ್ವ ನಿರೀಕ್ಷಕ ರಮೇಶ್, ಪುನೀತ್, ಆಕಾಶ್ ಮುಂತಾದವರು ಇದ್ದರು.

ನಿರ್ಭಯಾ ಪ್ರಕರಣದ ನಂತರ ಮಹಿಳಾ ಸಂರಕ್ಷಣಾ ಕಾನೂನುಗಳು ಬಲಗೊಂಡರೂ ದೌರ್ಜನ್ಯಗಳು ಕಡಿಮೆಯಾಗಿಲ್ಲ. ಜಾತಿ, ಧರ್ಮ, ಅಧಿಕಾರ ಮತ್ತು ಆರ್ಥಿಕ ಅಸಮಾನತೆಗಳು ಸ್ತ್ರೀ ದೌರ್ಜನ್ಯಕ್ಕೆ ಪ್ರಮುಖ ಕಾರಣವಾಗುತ್ತಿವೆ. ವಿಶೇಷವಾಗಿ ಅಸಂಘಟಿತ ವಲಯದ ಮಹಿಳೆಯರು ಆರ್ಥಿಕ ಭದ್ರತೆ ಇಲ್ಲದೆ ಶೋಷಣೆಗೆ ಒಳಗಾಗುತ್ತಿದ್ದಾರೆ.

• **ಡಾ. ಎಚ್.ಡಿ.ಪ್ರಶಾಂತ್** ಡೀನ್

ಸುದ್ದಿ ಸಿಂಚನ

ವೈಯಕ್ತಿಕ ಸೌಲಭ್ಯಗಳಿಗೆ ಧನಸಹಾಯ: ಸೂಚನೆ

ದಾವಣಗೆರೆ: ಮಲೇಬೆನ್ನೂರು ಪುರಸಭೆ ವತಿಯಿಂದ 2026-27ನೇ ಸಾಲಿನ ಸಾಮಾನ್ಯ ನಿಧಿ, ಶೇ.24.10, ಶೇ. 7.25 ಹಾಗೂ ಶೇ. 5ರ ಯೋಜನೆಯಡಿ ವಿವಿಧ ವೈಯಕ್ತಿಕ ಸೌಲಭ್ಯಗಳಿಗಾಗಿ ಅರ್ಹ ಫಲಾನುಭವಿಗಳಿಂದ ಶಸ್ತ್ರಚಿಕಿತ್ಸೆಗೆ ಒಳಗಾಗುವ ಬಡ ವರ್ಗದ ರೋಗಿಗಳು ಹಾಗೂ ವಿಕಲಚೇತನರಿಗೆ ಧನಸಹಾಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹರು ನಿಗದಿತ ಅರ್ಜಿ ನಮೂನೆ ಹಾಗೂ ಲಗತ್ತಿಸಬೇಕಾದಅಗತ್ಯ ದಾಖಲೆಗಳ ವಿವರಗಳನ್ನು ಮಲೇಬೆನ್ನೂರು ಪುರಸಭೆ ಕಚೇರಿಯಲ್ಲಿ ಅಥವಾ ಪುರಸಭೆಯ ಅಧಿಕೃತ ವೆಬ್‌ಸೈಟ್: http://malebennurutown.mrc.gov.in ಮೂಲಕ ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಮೇ 20, 2026 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಲೇಬೆನ್ನೂರು ಪುರಸಭೆ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

‘ಡಿಆರ್‌ಎಂ ಸಂಭ್ರಮ’ ವಾರ್ಷಿಕ ಸಮಾರೋಪ, ಪುಸ್ತಕ ಬಿಡುಗಡೆ

ದಾವಣಗೆರೆ: ನಗರದ ಬಾಪೂಜಿ ವಿದ್ಯಾಸಂಸ್ಥೆಯ ಡಿಆರ್‌ಎಂ ವಿಜ್ಞಾನ ಕಾಲೇಜಿನ ಸಾಂಸ್ಕೃತಿಕ ಸಂಘ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶದ ವತಿಯಿಂದ ‘ಡಿಆರ್‌ಎಂ ಸಂಭ್ರಮ 2026’ ವಾರ್ಷಿಕ ಸಮಾರೋಪ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮವು ಮೇ 9ರಂದು ನಗರದ ಜೆಜೆಎಂ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ಜರುಗಲಿದೆ. ಬೆಳಗ್ಗೆ 10 ಗಂಟೆಗೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಪಿ. ರೂಪಶ್ರೀ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಇಎನ್‌ಟಿ ತಜ್ಞ ಡಾ. ಎ.ಎಂ. ಶಿವಕುಮಾರ, ಜೋಳದಹಾಳ್ ಸರ್ಕಾರಿ ಪ್ರೌಢಶಾಲೆಯ ರಂಗಕಲಾ ಶಿಕ್ಷಕ ಡಾ.ಕೆ. ವೆಂಕಟೇಶ್ವರ, ಇಂಗ್ಲಿಷ್ ವಿಭಾಗದ ಮುಖ್ಯಸ್ಥ, ಲೇಖಕ ಡಾ.ಎಲ್.ಎಸ್.ರೋಹಿತ್, ಸಾಂಸ್ಕೃತಿಕ ಸಂಘದ ಸಂಚಾಲಕ ಶಿವಪ್ಪ ಮುಳ್ಳೂರು, ಡಾ.ಟಿ. ಮಂಜುರಾಜ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ''''ಜೆಂಡರ್‌ರೆಪ್ರೆಸೆಂಟೇಷನ್ಸ್ ; ದಿ ಐಡಿಯಾಲಾಜಿ ಅಂಡ್ ಇಂಡಿಯನ್ ವುಮೆನ್ ಸಿನಿಮಾ ಹಾಗೂ ಬೇಸಿಕ್ ಇಂಗ್ಲೀಷ್ ಗ್ರಾಮರ್‌ಲರ್ನ್ ಇಂಗ್ಲೀಷ್ ವಿತ್ ದಿ ಹೆಲ್ಪ್ ಆಫ್ ದಿ ಯುವರ್‌ಮದರ್ ಟಂಗ್ ಪುಸ್ತಕಗಳು ಲೋಕಾರ್ಪಣೆಗೊಳ್ಳಲಿವೆ.

ಇಂದು ಬಾಪೂಜಿ ಹೈಟೆಕ್ ಶಿಕ್ಷಣ ಸಂಸ್ಥೆ ವಾರ್ಷಿಕೋತ್ಸವ

ದಾವಣಗೆರೆ: ನಗರದ ಎಸ್.ಎಸ್. ಬಡಾವಣೆಯ ಬಾಪೂಜಿ ಹೈಟೆಕ್ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭ ಮತ್ತು ಸಾಂಪ್ರದಾಯಿಕ ದಿನವನ್ನು ಮೇ 9ರಂದು ಕಾಲೇಜಿನ ಆವರಣದಲ್ಲಿರುವ ಬಯಲು ರಂಗಮಂದಿರದಲ್ಲಿ ಜರುಗಲಿದೆ. ಬೆಳಗ್ಗೆ 10 ಗಂಟೆಗೆ ಸಾಂಪ್ರದಾಯಿಕ ದಿನ ನಡೆಯಲಿದೆ. ಸಂಜೆ 6 ಗಂಟೆಗೆ ಜರುಗುವ ವಾರ್ಷಿಕೋತ್ಸವ ಸಮಾರಂಭದಲ್ಲಿ ಡಯಮ್ಸ್ ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಬಾತಿ ಬಸವರಾಜ, ಬಾಪೂಜಿ ಹೈಟೆಕ್ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಬಿ. ವೀರಪ್ಪ ಭಾಗವಹಿಸಲಿದ್ದಾರೆ.

ಡಿಪ್ಲೊಮಾ: ಅರ್ಜಿ ಆಹ್ವಾನ

ದಾವಣಗೆರೆ: ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರದಲ್ಲಿ 2026-27ನೇ ಸಾಲಿನ ಶೈಕ್ಷಣಿಕ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಉದ್ಯೋಗ ಖಚಿತ ಡಿಪ್ಲೊಮಾಕೋರ್ಸ್‌ಗಳಾದಪ್ಲಾಸ್ಟಿಕ್‌ತಂತ್ರಜ್ಞಾನಹಾಗೂ ಪ್ಲಾಸ್ಟಿಕ್ ಅಚ್ಚು ತಂತ್ರಜ್ಞಾನ ವಿಭಾಗಗಳಲ್ಲಿ 3 ವರ್ಷಗಳ ಅವಧಿ ತರಬೇತಿಗೆ ಅವಕಾಶವಿದೆ. ಈ ಕೋರ್ಸುಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಅಥವಾ ಐ.ಟಿ.ಐ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಅಥವಾ ಫಲಿತಾಂಶದ ನಿರೀಕ್ಷೆಯಲ್ಲಿ ಇರುವವರು ಅರ್ಜಿ ಸಲ್ಲಿಸಬಹುದು. ವಿಜ್ಞಾನ ವಿಭಾಗದಲ್ಲಿ ಪಿ.ಯು.ಸಿ. ಅಥವಾ ಐ.ಟಿ.ಐ. ಮುಗಿಸಿದ ಅಭ್ಯರ್ಥಿಗಳಿಗೆ ನೇರವಾಗಿ 2ನೇ ವರ್ಷದ ಡಿಪ್ಲೊಮಾಗೆ ಪ್ರವೇಶ ಪಡೆಯುವ ವಿಶೇಷ ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಮೇ 28 ಕೊನೆಯ ದಿನ. ಹೆಚ್ಚಿನ ವಿವರಗಳಿಗಾಗಿ ಮತ್ತು ದಾಖಲಾತಿ ಪ್ರಕ್ರಿಯೆಗಾಗಿ ಆಸಕ್ತರು 9380756024 ಅಥವಾ 94802 53024 ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಲು ಸಂಸ್ಥೆ ಮುಖ್ಯಸ್ಥರು ತಿಳಿಸಿದ್ದಾರೆ.

ಬಸ್ ಪಲ್ಟಿ: ವಿದ್ಯಾರ್ಥಿ ಸಾವು, 7 ಜನ ಗಂಭೀರ

ಹಳೇ ಸರ್ಕಾರಿ ಬಸ್‌ನ ಆಕ್ಸೆಲ್ ತುಂಡಾಗಿದ್ದೇ ಕಾರಣ | ಗಾಯಾಳುಗಳಿಗೆ ನೆರವಾದ ಸ್ಥಳೀಯರು, ದಾರಿಹೋಕರು

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಹಳೇ ಸರ್ಕಾರಿ ಬಸ್‌ನ ಆಕ್ಸೆಲ್ ತುಂಡಾಗಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಓರ್ವ ಪದವಿ ವಿದ್ಯಾರ್ಥಿ ಸಾವನ್ನಪ್ಪಿ, 7 ಜನ ಗಂಭೀರ ಗಾಯಗೊಂಡ ಘಟನೆ ಚನ್ನಗಿರಿ ತಾ. ಬಸವಾಪಟ್ಟಣ ಸಮೀಪದ ಮರಬನಹಳ್ಳಿಯ ಬಳಿ ಶುಕ್ರವಾರ ಬೆಳಗ್ಗೆ ಸಂಭವಿಸಿದೆ. ಗಾಯಾಳುಗಳನ್ನು ದಾವಣಗೆರೆ ಜಿಲ್ಲಾಸ್ಪತ್ರೆ, ಖಾಸಗಿ ಆಸ್ಪತ್ರೆಗಳಿಗೆ, ಬಸವಾಪಟ್ಟಣದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಕುಂದೂರು ವಾಸಿ, ಬಿಕಾಂ ವಿದ್ಯಾರ್ಥಿ ದರ್ಶನ್ (21) ಘಟನೆಯಲ್ಲಿ ಸಾವನ್ನಪ್ಪಿದ್ದು, ಮಕ್ಕಳು, ಹಿರಿಯರು, ಮಹಿಳೆಯರು, ವಯೋವೃದ್ಧರು ಸೇರಿದಂತೆ 7 ಜನ ಗಂಭೀರ ಗಾಯಗೊಂಡಿದ್ದಾರೆ. ಸರ್ಕಾರಿ ಬಸ್ ದಾವಣಗೆರೆಯಿಂದ ಬಸವಾಪಟ್ಟಣ ಮಾರ್ಗವಾಗಿ ಹೊನ್ನಾಳಿ ಕಡೆಗೆ ಸಾಗುತ್ತಿದ್ದಾಗ ಮರಬನಹಳ್ಳಿ ಬಳಿ ಈ ದುರಂತ ಸಂಭವಿಸಿದೆ.

ಬಸ್ ಸಂಪೂರ್ಣ ನಜ್ಜುಗುಜ್ಜಾಗಿದೆ. ಗಾಯಾಳುಗಳಲ್ಲಿ ಶಾಲಾ-ಕಾಲೇಜು ಮಕ್ಕಳು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪೊಲೀಸರು ಸ್ಥಳಕ್ಕೆ ಧಾವಿಸಿ, ಸ್ಥಳೀಯರು, ದಾರಿಹೋಕರ ನೆರವಿನಿಂದ ರಕ್ಷಣಾ ಕಾರ್ಯ ಕೈಗೊಂಡರು. 108 ಆಂಬ್ಯುಲೆನ್ಸ್ ಮತ್ತು ಖಾಸಗಿ ವಾಹನಗಳ ಮೂಲಕ ಗಾಯಾಳುಗಳನ್ನು ಬಸವಾಪಟ್ಟಣ ಸರ್ಕಾರಿ ಆಸ್ಪತ್ರೆ ಹಾಗೂ ದಾವಣಗೆರೆ ಜಿಲ್ಲಾ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಿಗೆ ರವಾನಿಸಲಾಯಿತು.



ಮರಬನಹಳ್ಳಿ ಬಳಿ ಬಸ್ ಪಲ್ಟಿಯಾದ ಸ್ಥಳವನ್ನು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಪರಿಶೀಲಿಸಿದರು.

ದಾವಣಗೆರೆ-ಹೊನ್ನಾಳಿ ಮಾರ್ಗದಲ್ಲಿ ಸಾಗುತ್ತಿದ್ದ ಈ ಹಳೆ ಸರ್ಕಾರಿ ಬಸ್ ದುರಸ್ತಿಪಡಿಸುವಂತೆ ಅಥವಾ ಬೇರೆ ಬಸ್ ಈ ಮಾರ್ಗದಲ್ಲಿ ಬಿಡುವಂತೆ ಮಾರ್ಗದ ಗ್ರಾಮಸ್ಥರು, ಸ್ಥಳೀಯರು, ಪ್ರಯಾಣಿಕರು ಹೊನ್ನಾಳಿ ಶಾಸಕ ಡಿ.ಜಿ.ಶಾಂತನಗೌಡ ಅವರಿಗೆ ಸಾಕಷ್ಟು ಸಲ ಮನವಿ ಮಾಡಿದ್ದು ಗಮನೀಯ.

ಪರಿಹಾರಕ್ಕೆ ಸೂಚನೆ: ಬಸ್ ಅಪಘಾತದ ವಿಷಯ ತಿಳಿದು ಮಾಯಕೊಂಡ ಶಾಸಕ ಬಸವಂತಪ್ಪ ಬೆಂಗಳೂರಿನಿಂದಲೇ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ನೀಡುವಂತೆ ತಿಳಿಸಿದ್ದಾರೆ. ಮೃತಪಟ್ಟ ವಿದ್ಯಾರ್ಥಿ ಕುಟುಂಬಕ್ಕೆ ಕನಿಷ್ಠ 10 ಲಕ್ಷ ಪರಿಹಾರ, ಗಾಯಾಳುಗಳೆಲ್ಲರಿಗೂ ಸೂಕ್ತ ಪರಿಹಾರ, ಚಿಕಿತ್ಸೆ ವೆಚ್ಚ ಭರಿಸಲು ಸೂಚನೆ ನೀಡಿದ್ದಾರೆ. ವಿಷಯ ತಿಳಿದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಎಂ.ಬಸವರಾಜ ನಾಯ್ಕ ಸೇರಿದಂತೆ ಅನೇಕರು ಘಟನಾ ಸ್ಥಳಕ್ಕೆ, ಆಸ್ಪತ್ರೆಗೆ ಭೇಟಿ ನೀಡಿ, ಮೃತ ವಿದ್ಯಾರ್ಥಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಗಾಯಾಳುಗಳು ಮತ್ತು ಕುಟುಂಬಕ್ಕೆ ಧೈರ್ಯ ತುಂಬಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ತೆರಳಿದ್ದ ಗಾಯಾಳುಗಳ ಪೈಕಿ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದವರಿಗೆ ತಕ್ಷಣವೇ ದಾವಣಗೆರೆ ಜಿಲ್ಲಾಸ್ಪತ್ರೆ, ಖಾಸಗಿ ಆಸ್ಪತ್ರೆಗೆ ಆಂಬ್ಯುಲೆನ್ಸ್‌ಗಳಲ್ಲಿ ಕಳಿಸಿಕೊಡುವಂತೆ ಹೇಳಿದರು.

ಜಿಲ್ಲಾಧಿಕಾರಿ ಭೇಟಿ: ದಾವಣಗೆರೆ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ಸ್ಥಿತಿ ವಿಚಾರಿಸಿದರು. ಸಂತ್ರಸ್ತರಿಗೆ, ಅವರ ಕುಟುಂಬದವರಿಗೆ ಧೈರ್ಯ ಹೇಳಿ, ಘಟನೆಗೆ ವಿಷಾದಿಸಿದರು. ವೈದ್ಯರೊಂದಿಗೆ ಚರ್ಚಿಸಿ, ಗಾಯಾಳುಗಳಿಗೆ ತುರ್ತು, ಗುಣಮಟ್ಟದ ಚಿಕಿತ್ಸೆ ನೀಡುವಂತೆ ಸೂಚಿಸಿದರು. ಗಂಭೀರ ಗಾಯಗೊಂಡವರಿಗೆ ವಿಶೇಷ ನಿಗಾ ವಹಿಸಲು ಆರೋಗ್ಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಮರಬನಹಳ್ಳಿ ಬಳಿ ಕೆಎಸ್ಸಾರ್ಟಿಸಿ ಬಸ್ ಪಲ್ಟಿಯಾಗಿರುವುದು.



ಬಸ್ ಅಪಘಾತದಿಂದ ಗಾಯಗೊಂಡವರನ್ನು ಮಾಜಿ ಸಚಿವ ರೇಣುಕಾಚಾರ್ಯ ಆರೋಗ್ಯ ವಿಚಾರಿಸಿದರು.

ನಿಮಿಷಕ್ಕೆ 51 ಸ್ತ್ರೀ ದೌರ್ಜನ್ಯ ಪ್ರಕರಣ ದಾಖಲು

ಹರಿಹರದಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಡಾ.ಪ್ರಶಾಂತ್ ತೀವ್ರ ಕಳವಳ

• **ಕನ್ನಡಪ್ರಭ ವಾರ್ತೆ** ಹರಿಹರ

ಭಾರತ ಇಂದು ಆರ್ಥಿಕವಾಗಿ 6ನೇ ಹಾಗೂ ಖರೀದಿ ಸಾಮರ್ಥ್ಯದಲ್ಲಿ 2ನೇ ಸ್ಥಾನದಲ್ಲಿದೆ ಎಂದು ನಾವು ಹೆಮ್ಮೆಪಡುತ್ತೇವೆ. ಆದರೆ, ಇದೇ ದೇಶದಲ್ಲಿ ಪ್ರತಿ ನಿಮಿಷಕ್ಕೆ 51 ಸ್ತ್ರೀ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿರುವುದು ಅತ್ಯಂತ ಆತಂಕಕಾರಿ ಹಾಗೂ ವಿಪರ್ಯಾಸದ ಸಂಗತಿ ಎಂದು ಹಂಪಿ ಕನ್ನಡ ವಿ.ವಿ.ಯ ಅಭಿವೃದ್ಧಿ ಅಧ್ಯಯನ ವಿಭಾಗ ಮುಖ್ಯಸ್ಥ ಹಾಗೂ ಸಮಾಜ ನಿಕಾಯದ ಡೀನ್ ಡಾ. ಎಚ್.ಡಿ. ಪ್ರಶಾಂತ್ ತೀವ್ರ ಕಳವಳ ವ್ಯಕ್ತಪಡಿಸಿದರು.

ನಗರದ ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ‘ಮಹಿಳಾ ಸಬಲೀಕರಣ: ಸಮಕಾಲೀನ ಸವಾಲುಗಳು ಮತ್ತು ಮುಂದಣ ಹಾದಿ’ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ನಿರ್ಭಯಾ ಪ್ರಕರಣದ ನಂತರ ಮಹಿಳಾ ಸಂರಕ್ಷಣಾ ಕಾನೂನುಗಳು ಬಲಗೊಂಡರೂ ದೌರ್ಜನ್ಯಗಳು ಕಡಿಮೆಯಾಗಿಲ್ಲ. ಜಾತಿ, ಧರ್ಮ, ಅಧಿಕಾರ ಮತ್ತು ಆರ್ಥಿಕ ಅಸಮಾನತೆಗಳು ಸ್ತ್ರೀ ದೌರ್ಜನ್ಯಕ್ಕೆ ಪ್ರಮುಖ ಕಾರಣವಾಗುತ್ತಿವೆ. ವಿಶೇಷವಾಗಿ ಅಸಂಘಟಿತ ವಲಯದ ಮಹಿಳೆಯರು ಆರ್ಥಿಕ ಭದ್ರತೆ ಇಲ್ಲದೆ ಶೋಷಣೆಗೆ ಒಳಗಾಗುತ್ತಿದ್ದಾರೆ. ಶಾಲೆಗಳಲ್ಲಿಯೇ ನಡೆಯುವ ಲೈಂಗಿಕ ದೌರ್ಜನ್ಯಗಳು ನಮ್ಮ ಶಿಕ್ಷಣ ವ್ಯವಸ್ಥೆಯ ಸುರಕ್ಷತೆಯನ್ನೇ ಪ್ರಶ್ನಿಸುವಂತಿವೆ ಎಂದರು.



ಹರಿಹರದ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ‘ಮಹಿಳಾ ಸಬಲೀಕರಣ: ಸಮಕಾಲೀನ ಸವಾಲುಗಳು ಮತ್ತು ಮುಂದಣ ಹಾದಿ’ ವಿಚಾರ ಸಂಕಿರಣ ನಡೆಯಿತು.

ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ರಚನಾತ್ಮಕ ಸಾಮಾಜಿಕ ಬದಲಾವಣೆಯೇ ನಿಜವಾದ ಮಹಿಳಾ ಸಬಲೀಕರಣ. ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗಿ ಆತ್ಮವಿಶ್ವಾಸದಿಂದ ಬದುಕಬೇಕು. ಗ್ರಾಮೀಣ ಮಹಿಳೆಯರ ಸಾಧನೆಗಳನ್ನು ಸಮಾಜಕ್ಕೆ ಪರಿಚಯಿಸುವ ಕೆಲಸವಾಗಬೇಕಿದೆ ಎಂದರು.

ವಿಚಾರ ಸಂಕಿರಣದಲ್ಲಿ ಮಹಿಳಾ ಹಕ್ಕುಗಳು, ಸಾಮಾಜಿಕ ಅಸಮಾನತೆ, ಉದ್ಯೋಗಾವಕಾಶ, ಆರೋಗ್ಯ ಹಾಗೂ ಕಾನೂನು ಅರಿವಿನ ಕುರಿತು ತಜ್ಞರು ವಿಷಯ ಮಂಡಿಸಿ ದರು. ವಿದ್ಯಾರ್ಥಿನಿಯರಿಂದ ನಡೆದ ಪ್ರಬಂಧ ಮಂಡನೆ ಹಾಗೂ ಪ್ರಶ್ನೋತ್ತರ ಸಂವಾದ ಗಮನ ಸೆಳೆಯಿತು.

ಪೌರಕಾರ್ಮಿಕ ಮಹಿಳೆಯರಾದ ನೇತ್ರಾವತಿ ಹಾಗೂ ಹುಚ್ಚಂಗೆಮ್ಮ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಚಾರ್ಯ ಡಾ. ಶ್ರೀನಿವಾಸ ಆಜೂರ ಅಧ್ಯಕ್ಷತೆ ವಹಿಸಿದ್ದರು. ಜನಸ್ಪಂದನ ಟ್ರಸ್ಟ್ ಅಧ್ಯಕ್ಷ ಸುನಿಲ್ ಕುಮಾರ್ ಬಿ.ಎನ್. ಕಾಲೇಜು ಆಡಳಿತ ಮಂಡಳಿ, ಜನಸ್ಪಂದನ ಟ್ರಸ್ಟ್ ಹಾಗೂ ಸುದ್ದಿ ಪಬ್ಲಿಕೇಷನ್ಸ್ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

ಪೌರಸೇವಾ ಸಮಿತಿ ಅಧ್ಯಕ್ಷ ಜಿ.ಎಂ. ತಿಪ್ಪೇಸ್ವಾಮಿ, ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್, ನಿರ್ದೇಶಕರಾದ ಆರ್.ವಿ. ಬಲರಾಮ ಶ್ರೇಷ್ಠಿ, ಪರಮೇಶ್ವರಪ್ಪ, ಆರ್.ವಿ. ಕೃಷ್ಣಮೂರ್ತಿ, ಅತಿಥಿಗಳಾದ ಪ್ರೊ. ಯಶೋಧ ಸಿ.ವೈ., ಡಾ. ಅನಸೂಯ ಕಾಂಬಳೆ, ಸುಜಾತ ಟಿ.ಡಿ., ಡಾ. ತಿಮ್ಮಪ್ಪ ಎ.ಕೆ., ಗೌರಮ್ಮ, ಐಕ್ಯೂಎಸಿ ಸಂಚಾಲಕಿ ವೀಣಾ ಎಚ್.ಎಂ., ಡಾ. ಬಾಹುಬಲಿ ವನಕುದರಿ ಉಪಸ್ಥಿತರಿದ್ದರು.

‘ಕೃಷಿ ಜಾಗೃತಿ ಮೂಡಿಸಲು ಧರತಿ ಮಾತಾ ಬಚಾವೋ ಅಭಿಯಾನ’

• **ಕನ್ನಡಪ್ರಭ ವಾರ್ತೆ** ಹೊನ್ನಾಳಿ

2026-27ನೇ ಸಾಲಿನ ಧರತಿ ಮಾತಾ ಬಚಾವೋ ಅಭಿಯಾನ ಕಾರ್ಯಕ್ರಮದ ಪ್ರಮುಖ ಉದ್ದೇಶ ರೈತರು ಅತಿ ಹೆಚ್ಚು ಮತ್ತು ಅನಾವಶ್ಯಕ ರಸಗೊಬ್ಬರ ಬಳಕೆ ಬಗ್ಗೆ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟುವುದರೊಂದಿಗೆ ವೈಜ್ಞಾನಿಕ ರಸಗೊಬ್ಬರ ಬಳಕೆ ಮತ್ತು ಮಣ್ಣಿನ ಆರೋಗ್ಯ ಕಾಪಾಡಿ ಸುಸ್ಥಿರತೆ ತರುವುದಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಬಿ.ಎನ್.ವಿಶ್ವನಾಥ ತಿಳಿಸಿದ್ದಾರೆ.

ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯ ಅರಕೆರೆ, ಮಾಸಡಿ, ಹನುಮಸಾಗರ ಮತ್ತು ಬೇಲಿಮಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಕಾರ್ಯಕ್ರಮ ನಡೆಸಲಾಗಿದೆ. ತಾಲೂಕಿನ ಇತರೆ ಗ್ರಾಮ ಪಂಚಾಯಿತಿಗಳಲ್ಲಿ ಕೂಡ ಧರತಿ ಬಚಾವೋ ಆಂದೋಲನ ಕಾರ್ಯಕ್ರಮಗಳನ್ನು ನಡೆಸಿ, ರೈತರಲ್ಲಿ ಅರಿವು ಮೂಡಿಸಲಾಗುವುದು ಎಂದರು.

ಕೃಷಿ ಅಧಿಕಾರಿ ಅತ್ತೀಕ್ ಉಲ್ಲಾ ಕಾರ್ಯಕ್ರಮ ಕುರಿತು ಮಾಹಿತಿ ನೀಡಿ, ರಸಗೊಬ್ಬರಗಳ ಕಳ್ಳಸಾಗಣೆ, ಅನಧಿಕೃತ ರಸಗೊಬ್ಬರ ದಾಸ್ತಾನು ಮತ್ತು ಮಾರಾಟ, ನಕಲಿ ರಸಗೊಬ್ಬರಗಳ ಹಾವಳಿ ತಡೆಗಟ್ಟುವುದು ಕೂಡ ಆಂದೋಲನದ ಪ್ರಮುಖ ಉದ್ದೇಶವಾಗಿದೆ ಎಂದರು.

2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಅವಶ್ಯವಿರುವ ರಸಗೊಬ್ಬರವನ್ನು ಸಮರ್ಪಕ ದಾಸ್ತಾನು ಮತ್ತು ವಿತರಣೆ ಮಾಡುವ ಬಗ್ಗೆ ಗಮನಹರಿಸಿ ಯಾವುದೇ ರೀತಿಯ ರಸಗೊಬ್ಬರದ ಕೊರತೆ ಆಗದಂತೆ ತೀವ್ರ ನಿಗಾವಹಿಸಿ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಾಗುತ್ತದೆ ಎಂದು.

ಕೃಷಿ ಪರಿಕರ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ, ರೈತರಿಗೆ ಮುಂಗಾರು ಪ್ರಾರಂಭ ಆಗುವ ಮೊದಲೇ ಹೆಚ್ಚು ಹೆಚ್ಚು ರಸಗೊಬ್ಬರಗಳನ್ನು ಅನಾವಶ್ಯಕವಾಗಿ ವಿತರಿಸಿರುವುದು ಕಂಡುಬಂದಲ್ಲಿ ಅಂತಹ ಕೃಷಿ ಪರಿಕರಗಳ ಮಾರಾಟ ಮಳಿಗೆಗಳ ಪರವಾನಿಗೆಗಳನ್ನು ರದ್ದುಗೊಳಿಸುವ ಜೊತೆಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ರೈತರಿಗೆ ಅರಿವು ಮತ್ತು ಜಾಗೃತಿ ಮೂಡಿಸಿ, ಕೃಷಿ ಇಲಾಖೆ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೃಷಿ ಇಲಾಖೆಯಿಂದ ನಡೆಸಲಾಗುವ ಈ ಕಾರ್ಯಕ್ರಮಗಳಲ್ಲಿ ಗ್ರಾಪಂ ಅಧ್ಯಕ್ಷರು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಪ್ರಗತಿಪರ ರೈತರು, ಕೃಷಿ ಇಲಾಖೆ ಸಿಬ್ಬಂದಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಎಜುಕೇಷನ್-ಕರಿಯರ್ ಎಕ್ಸ್ಪೋ-2026

23, 24ರಂದು ದಾವಣಗೆರೆಯಲ್ಲಿ ಆಯೋಜನೆ: ಪವನ್ ಮಾಹಿತಿ

ದಾವಣಗೆರೆ: ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ಎಜುಕೇಷನ್ ಮತ್ತು ಕರಿಯರ್ ಎಕ್ಸ್ಪೋ-2026ನ್ನು ಮೇ 23ರ ಶನಿವಾರ ಮತ್ತು 24ರ ಭಾನುವಾರ ನಗರದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಅಭಿನವ ರೇಣುಕಾ ಮಂದಿರದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಎಜು ಕನೆಕ್ಟ್ ಕಂಪನಿಯ ಸಂಸ್ಥಾಪಕ, ಸಿಇಒ ಪವನ್ ಓಲೇಕಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 23ರಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ಉದ್ಘಾಟನೆ ಆಗಲಿದೆ. ಎರಡು ದಿನಗಳ ಕಾಲ ನಡೆಯುವ ಈ ಎಜು ಎಕ್ಸ್ಪೋ ಪೋಷಕರು, ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯಾಭ್ಯಾಸ ಮತ್ತು ವೃತ್ತಿ ಆಯ್ಕೆ ಮಾಡಲು ಸಹಾಯ ಮಾಡುತ್ತದೆ. ಕೌನ್ಸಿಲಿಂಗ್, ದಾಖಲಾತಿ ಪ್ರೋತ್ಸಾಹ, ವಿದ್ಯಾರ್ಥಿ ವೇತನ ಕುರಿತ ಮಾಹಿತಿ, ಪ್ರಮುಖ ಉನ್ನತ ಕಾಲೇಜುಗಳ ಪರಿಚಯವನ್ನು ನೀಡಲಾಗುವುದು ಎಂದರು.

ಈ ಎಕ್ಸ್ಪೋ ನಡೆಸಲು ಕಾರಣವೇನೆಂದರೆ ಪ್ರಸ್ತುತ ಎಐ ಯುಗದಲ್ಲಿ ಉದ್ಯೋಗ ಪಡೆಯುವುದು ದಿನದಿಂದ ದಿನಕ್ಕೆ ಹೆಚ್ಚು ಸವಾಲಿನ ವಿಷಯವಾಗುತ್ತಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ಸಿಗದ ಕಾರಣ ಹಲವಾರು ವಿದ್ಯಾರ್ಥಿಗಳು ಸಾಮಾನ್ಯ ಕೋರ್ಸುಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ತಪ್ಪಾದ ವೃತ್ತಿಯ ಆಯ್ಕೆಯಿಂದ ನಿರುದ್ಯೋಗಕ್ಕೆ ಪ್ರಮುಖ ಕಾರಣವಾಗುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ವಿದ್ಯಾರ್ಥಿಗಳು, ಪೋಷಕರಿಗೆ ಸರಿಯಾದ ಮಾಹಿತಿ, ಮಾರ್ಗದರ್ಶನ ಮತ್ತು ಉತ್ತಮ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಈ ಎಜುಕೇಷನ್ ಎಕ್ಸ್ಪೋ 2026ನ್ನು ನಮ್ಮ ದಾವಣಗೆರೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



ಪವನ್ ಓಲೇಕಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಈ ಎಕ್ಸ್ಪೋನಲ್ಲಿ 10ನೇ ತರಗತಿ, ಪಿಯುಸಿ, ಪದವಿ ವಿದ್ಯಾರ್ಥಿಗಳು, ಪೋಷಕರು, ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಬಹುದು. ಇದು ದಾವಣಗೆರೆ ಜಿಲ್ಲೆಯ ಹರಿಹರ, ಚನ್ನಗಿರಿ, ಹೊನ್ನಾಳಿ ತಾಲೂಕುಗಳು ವಿಜಯನಗರ ಜಿಲ್ಲೆಯ ಹರಪನಹಳ್ಳಿ, ಮತ್ತು ಸುತ್ತಮುತ್ತಲ ಜಿಲ್ಲೆಗಳಾದ ಚಿತ್ರದುರ್ಗ, ಶಿವಮೊಗ್ಗ ಸೇರಿದಂತೆ ವಿವಿಧೆಡೆಯಿಂದ ಸಾಕಷ್ಟು ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಇಲ್ಲಿ ಎಲ್ಲರಿಗೂ ಮುಕ್ತ ಅವಕಾಶವಿದ್ದು, ತಮ್ಮ ಮುಂದಿನ ಯೋಜನೆಯ ಬಗ್ಗೆ ಸರಿಯಾದ ಮಾರ್ಗದರ್ಶನ ಪಡೆಯಬಹುದು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಹಾವೀರ ಸಾಂಘ್ವಿ ಇದ್ದರು.

ಮಹಿಳಾ ವಾಲ್ಮೀಕಿ ನಾಯಕ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಸಹಕಾರ: ಸಚಿವ ಜಾರಕಿಹೊಳಿ

ದಾವಣಗೆರೆ: ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಶುಕ್ರವಾರ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಇಲ್ಲಿನ ಎಂಬಿಎ ಹೆಲಿಪ್ಯಾಡ್ ಬಳಿ ಅವರನ್ನು ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದಿಂದ ಸ್ವಾಗತಿಸಿ, ದಾವಣಗೆರೆಯಲ್ಲಿ ನಿರ್ಮಾಣ ಆಗುತ್ತಿರುವ ನಾಯಕ ಮಹಿಳಾ ವಿದ್ಯಾರ್ಥಿ ನಿಲಯದ ಭೂಮಿ ಪೂಜಾ ಕಾರ್ಯಕ್ರಮಕ್ಕೆ ಆಗಮಿಸುವಂತೆ ಆಹ್ವಾನಿಸಲಾಯಿತು.

ಸಚಿವರು ಮಾತನಾಡಿ, ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮಹಿಳಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಕೊರತೆ ಇದೆ. ನಾಯಕ ಸಮಾಜದಿಂದ ಈ ಕೆಲಸ ಶೀಘ್ರ ನಿರ್ವಹಿಸಿರಿ. ಸುಸಜ್ಜಿತ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಸಹಕಾರ ನೀಡುವುದಾಗಿ ತಿಳಿಸಿದರು.

ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ.ವೀರಣ್ಣ, ಎಂ.ಎಂ. ಆಂಜನೇಯ ಗುರೂಜಿ, ಶ್ಯಾಗಲೆ ಕೆ. ಆರ್.ಮಂಜುನಾಥ್, ಶಂಭುಲಿಂಗಪ್ಪ, ಎ.ಬಿ.ರಾಮಚಂದ್ರಪ್ಪ ಇತರರಿದ್ದರು.



ಸಚಿವ ಸತೀಶ ಜಾರಕಿಹೊಳಿ ಅವರಿಗೆ ದಾವಣಗೆರೆಯ ಜಿಲ್ಲಾ ನಾಯಕ ಸಮಾಜದಿಂದ ನಿರ್ಮಾಣವಾಗುವ ನಾಯಕ ಮಹಿಳಾ ವಿದ್ಯಾರ್ಥಿ ನಿಲಯದ ಭೂಮಿ ಪೂಜಾ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

ರಾಮಚಂದ್ರಪ್ಪನಂತೆ ಬದ್ಧತೆಯಿಂದ ಪಕ್ಷವನ್ನು ಕಟ್ಟೋಣ: ಜಿ.ಯಲ್ಲಪ್ಪ

ಎಚ್.ಕೆ. ರಾಮಚಂದ್ರಪ್ಪ 5ನೇ ವರ್ಷದ ಸ್ಮರಣೆ ಕಾರ್ಯಕ್ರಮ



ದಾವಣಗೆರೆಯಲ್ಲಿಂದು ಕಾರ್ಮಿಕ ಮುಖಂಡ ಎಚ್.ಕೆ. ರಾಮಚಂದ್ರಪ್ಪ ಅವರ 5ನೇ ವರ್ಷದ ಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು.

ದಾವಣಗೆರೆ: ಕಾರ್ಮಿಕ ಮುಖಂಡರಾದ ಎಚ್.ಕೆ. ರಾಮಚಂದ್ರಪ್ಪ ಅವರಂತೆ ಬದ್ಧತೆಯಿಂದ ಕಮ್ಯುನಿಸ್ಟ್ ಪಕ್ಷ ಕಟ್ಟುವ ಕೆಲಸ ಮುಂದುವರಿಸೋಣ ಎಂದು ಸುರೇಶ್ ಶೇಖರಪ್ಪ ಪಂಪಾಪತಿ ರೈತ ಕಾರ್ಮಿಕರ ಕಲ್ಯಾಣಾಭಿವೃದ್ಧಿ ಟ್ರಸ್ಟ್ ಖಜಾಂಚಿ ಜಿ.ಯಲ್ಲಪ್ಪ ಹೇಳಿದರು.

ಇಲ್ಲಿನ ಅಶೋಕ ರಸ್ತೆಯ ಕಾಮ್ರೆಡ್ ಪಂಪಾಪತಿ ಭವನದಲ್ಲಿ ಶುಕ್ರವಾರ ಸಿಪಿಐ ಮತ್ತು ಎಐಟಿಯುಸಿ ಜಿಲ್ಲಾ ಮಂಡಳಿ ನೇತೃತ್ವದಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಮತ್ತು ದಾವಣಗೆರೆ ನಗರಸಭೆ ಮಾಜಿ ಅಧ್ಯಕ್ಷರಾಗಿದ್ದ ಎಚ್.ಕೆ. ರಾಮಚಂದ್ರಪ್ಪನವರ 5ನೇ ವರ್ಷದ ಸ್ಮರಣೆ ಕಾರ್ಯಕ್ರಮದಲ್ಲಿ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಅಧ್ಯಕ್ಷತೆ ವಹಿಸಿ ಮಾತನಾಡಿ, ಎಚ್‌ಕೆಆರ್ ಸಮಾಜದ ಬದಲಾವಣೆಗಾಗಿ ದೂರದೃಷ್ಟಿ ಉಳ್ಳ ನಾಯಕತ್ವ ಗುಣ ಹೊಂದಿದ್ದರು. ನಗರದಲ್ಲಿ ಯಾವುದೇ ಗೊಂದಲ, ಸಂಘರ್ಷಗಳು ಉಂಟಾದಾಗ ಮಧ್ಯೆ ಪ್ರವೇಶಿಸಿ ಘರ್ಷಣೆಗಳನ್ನು ತಪ್ಪಿಸಿ ನಿಜವಾದ ನಾಯಕ ಎನಿಸಿಕೊಂಡಿದ್ದರು ಎಂದರು.

ಈ ಸಂದರ್ಭ ಟ್ರಸ್ಟ್ ಅಧ್ಯಕ್ಷ ಎಚ್.ಜಿ.ಉಮೇಶ್, ಎಐಟಿಯುಸಿ ಮುಖಂಡ ಎನ್.ಬಿ.ಮಂಜುನಾಥ ಹರಿಹರ, ಸಿಪಿಐ ಜಗಳೂರು ತಾಲೂಕು ಮಂಡಳಿ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ, ಎಐಟಿಯುಸಿ ಮುಖಂಡರಾದ ಎಸ್.ಎಸ್.ಮಲ್ಲಮ್ಮ, ಹೊಸಳ್ಳಿ ಮಂಜುಳಾ, ದಾವಣಗೆರೆ ತಾಲೂಕು ಸಿಪಿಐ ಕಾರ್ಯದರ್ಶಿ ಕೆರನಹಳ್ಳಿ ರಾಜು, ಎಐಟಿಯುಸಿ ಮುಖಂಡ ಶೇಖರ ನಾಯಕ, ಶಿವಮೂರ್ತಿ, ಸರೋಜಾ, ಜಗಳೂರು ತಿಪ್ಪೇಸ್ವಾಮಿ, ದಾದಾಪೀರ್, ವಿ ಲಕ್ಷ್ಮಣ, ಪಿ.ಷಣ್ಮುಖಸ್ವಾಮಿ, ಕುಮಾರ ನಾಯಕ, ಮಹೇಶ್, ರಮೇಶ್ ದಾಸರ್, ತಿಪ್ಪೇಶ್, ಪದ್ಮಾ, ಪುಷ್ಪಾ, ಜ್ಯೋತಿ ಲಕ್ಷ್ಮಿ, ಕುಸುಮ, ಇ.ಎಸ್. ಉಮೇಶ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ವೈದ್ಯಕೀಯ ಲೋಕದ ಅಚ್ಚರಿ | **ಎಸ್‌ಎಸ್ ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್‌ನಲ್ಲಿ ಅಪರೂಪದ ಶಸ್ತ್ರಚಿಕಿತ್ಸೆ: ಡಾ.ಮಲ್ಲೇಶ್**

ಮಾಡಿಫೈಡ್ ಬೆಂಟಾಲ್ ಪ್ರೊಸೀಜರ್ ಓಪನ್ ಹಾರ್ಟ್ ಸರ್ಜರಿ ಯಶಸ್ವಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ನಗರದ ಎಸ್.ಎಸ್.ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್‌ನಲ್ಲಿ ಈ ಭಾಗದ ಇತಿಹಾಸದಲ್ಲೇ ಮೊದಲ ಬಾರಿಗೆ ಅಪರೂಪದ, ಅತ್ಯಂತ ಸಂಕೀರ್ಣವಾದ ''ಮಾಡಿಫೈಡ್ ಬೆಂಟಾಲ್ ಪ್ರೊಸೀಜರ್'' ಎಂಬ ಓಪನ್ ಹಾರ್ಟ್ ಶಸ್ತ್ರಚಿಕಿತ್ಸೆಯನ್ನು ಮಾಡುವ ಮೂಲಕ ತನ್ನ ಶ್ರೇಷ್ಠತೆ ಮತ್ತೊಮ್ಮೆ ದಾಖಲು ಮಾಡಿದೆ.

ಸೆಂಟರ್‌ನ ಹಿರಿಯ ಹೃದ್ರೋಗ ತಜ್ಞ ಡಾ.ಮಲ್ಲೇಶ್ ಸುದ್ದಿಗೋಷ್ಠಿಯಲ್ಲಿ ಇತ್ತೀಚೆಗೆ ಮಾತನಾಡಿ, ತೀವ್ರ ಎದೆನೋವಿನಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ 43 ವರ್ಷದ ವ್ಯಕ್ತಿಗೆ ಈ ಶಸ್ತ್ರಚಿಕಿತ್ಸೆ ನಡೆಸಲಾಯಿತು. ರೋಗಿಯ ಹೃದಯದ ಪ್ರಮುಖ ರಕ್ತನಾಳವು ಸಾಮಾನ್ಯವಾಗಿ 4 ಸೆಂಟಿ ಮೀಟರ್‌ನಷ್ಟು ಉಬ್ಬಿಕೊಂಡು ಬ್ಲಾಕ್ ಆಗಿರುತ್ತದೆ. ಆದರೆ ಈ ವ್ಯಕ್ತಿಯಲ್ಲಿ ಹೃದಯದ ಮಾಂಸಖಂಡಗಳು ದುರ್ಬಲವಾಗಿ ಸುಮಾರು 8.5 ಸೆಂ.ಮಿ.ನಷ್ಟು ಬಲೂನ್‌ನಂತೆ ಊದಿಕೊಂಡು ಉಸಿರಾಡುವುದೂ ಕಷ್ಟವಾಗಿತ್ತು. ಯಾವುದೇ ಕ್ಷಣದಲ್ಲಿ ಅದು ಛಿದ್ರಗೊಳ್ಳುವ ಅಪಾಯವಿತ್ತು ಎಂದರು.



ಅನಂತರ ಕಾರ್ಡಿಯೋಥೊರಾಸಿಕ್ ವ್ಯಾಸ್ಕುಲರ್ ಸರ್ಜನ್ ಡಾ.ಎ.ಗೌತಮ್ ನೇತೃತ್ವದ ತಂಡವು ಸುಮಾರು 5 ರಿಂದ 6 ಗಂಟೆಗಳ ಕಾಲ ಸತತವಾಗಿ ಶಸ್ತ್ರಚಿಕಿತ್ಸೆ ನಡೆಸಿ ಹಾನಿಗೊಳಗಾಗಿದ್ದ ಮಹಾಪಧಮನಿಯ ಕವಾಟ, ಅದರ ಬುಡ ಮತ್ತು ಊದಿಕೊಂಡಿದ್ದ ಆ ಭಾಗವನ್ನು ತೆಗೆದುಹಾಕಿ ಅದರ ಜಾಗದಲ್ಲಿ ಕೃತಕ ಸಿಂಥೆಟಿಕ್ ಗ್ರಾಫ್ಟ್ ಅಳವಡಿಕೆ ಮಾಡುವಲ್ಲಿ ಯಶಸ್ವಿಯಾಯಿತು ಎಂದು ವಿವರಿಸಿದರು.

ಸರ್ಜನ್ ಡಾ.ಗೌತಮ್ ಮಾತನಾಡಿ, ಇದೇ ಮೊದಲ ಬಾರಿಗೆ ಈ ಅಪರೂಪದ ಶಸ್ತ್ರಚಿಕಿತ್ಸೆ ಯನ್ನು ಮಾಡಿಲಾಗಿದ್ದು, ಯಶಸ್ವಿಯೂ ಆಗಿದ್ದೇವೆ. ರೋಗಿಯ ಹೃದಯದ ರಕ್ತನಾಳವು ಅತಿಯಾಗಿ ಊದಿಕೊಂಡಿತ್ತು. ಈ ಗಡ್ಡೆಯಂತಹ ಊತ ಎಷ್ಟು ದೊಡ್ಡದಾಗಿತ್ತೆಂದರೆ ಅದು ಹೃದಯದ ಬಲಭಾಗದ ಮೇಲಿನ ಕೋಣೆಯ ಮೇಲೆ ಒತ್ತಡವನ್ನು ಉಂಟು ಮಾಡುತ್ತಿತ್ತು. ಇದು ಪ್ರಾಣಕ್ಕೆ ಅಪಾಯ ತರುವಂತಹ ಸ್ಥಿತಿಯಾಗಿತ್ತು ಎಂದು ಹೇಳಿದರು.

ಶಸ್ತ್ರಚಿಕಿತ್ಸೆಯ ನಂತರ ರೋಗಿ ಅದ್ಭುತವಾಗಿ ಚೇತರಿಸಿಕೊಂಡಿದ್ದಾರೆ. ಅನಂತರ ನಡೆಸಿದ ತಪಾಸಣೆಗಳಲ್ಲಿ ಹೃದಯದ ಕಾರ್ಯನಿರ್ವಹಣೆ ಮತ್ತು ಹೊಸ ಕವಾಟದ ಚಲನೆ ಉತ್ತಮವಾಗಿರುವುದು ದೃಢಪಟ್ಟಿದೆ. ರೋಗಿಯು ಸಂಪೂರ್ಣವಾಗಿ ಗುಣಮುಖರಾಗಿದ್ದು, ಕೆಲ ದಿನಗಳ ಹಿಂದೆಯೇ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗುಣಮುಖರಾದ ಆಸೀಮ್ ಖಾನ್, ಆಸ್ಪತ್ರೆಯ ಪ್ರಶಾಂತ್ ಇದ್ದರು.

ಬೆಂಗಳೂರು, ಹೈದರಾಬಾದ್‌ಗೆ ಹೋಗಬೇಕಿಲ್ಲ: ಸುನೀಲ್ ಭಂಡಾರಿಗಲ್

ಸೆಂಟರ್‌ನ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ಭಂಡಾರಿಗಲ್ ಮಾತನಾಡಿ, ''ಮಾಡಿಫೈಡ್ ಬೆಂಟಾಲ್ ಪ್ರೊಸೀಜರ್'' ಓಪನ್ ಹಾರ್ಟ್ ಸರ್ಜರಿ ಸಾಧನೆಯು ಮಧ್ಯ ಕರ್ನಾಟಕದ ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ತಂದಿದೆ. ಈ ಹಿಂದೆ ಇಂತಹ ಗಂಭೀರ ಸಮಸ್ಯೆಯಿದ್ದವರು ಬೆಂಗಳೂರು ಅಥವಾ ಹೈದರಾಬಾದ್ ನಂತಹ ಮಹಾನಗರಗಳಿಗೆ ಅಲೆಯಬೇಕಿತ್ತು. ತುರ್ತು ಸಂದರ್ಭಗಳಲ್ಲಿ ಅಷ್ಟು ದೂರ ಪ್ರಯಾಣ ಮಾಡುವುದು ಜೀವಕ್ಕೆ ಕುತ್ತು ತರುವ ಸಾಧ್ಯತೆ ಇರುತ್ತಿತ್ತು. ಆದರೆ, ಈಗ ದಾವಣಗೆರೆಯಲ್ಲೇ ಇಂತಹ ಅತ್ಯಾಧುನಿಕ ಚಿಕಿತ್ಸೆ ಲಭ್ಯವಿರುವುದು ಈ ಭಾಗದ ಜನರಿಗೆ ನೆಮ್ಮದಿ ತಂದಿದೆ ಎಂದರು. ಮಧ್ಯ ಕರ್ನಾಟಕದ ಜನರ ಮನೆಬಾಗಿಲಿಗೇ ವಿಶ್ವದರ್ಜೆಯ ಹೃದಯ ಚಿಕಿತ್ಸೆಯನ್ನು ತಲುಪಿಸು ವುದು ನಮ್ಮ ಉದ್ದೇಶ. ಎಷ್ಟೇ ಸಂಕೀರ್ಣವಾದ ಹೃದಯ ಕಾಯಿಲೆಗಳಿದ್ದರೂ ನಮ್ಮಲ್ಲಿ ಯಶಸ್ವಿಯಾಗಿ ಚಿಕಿತ್ಸೆ ನೀಡಬಹುದು ಎಂಬುದಕ್ಕೆ ಈ ಶಸ್ತ್ರಚಿಕಿತ್ಸೆಯೇ ಸಾಕ್ಷಿ ಎಂದು ತಿಳಿಸಿದರು.

> ಪೇಪರ್‌ಲೆಸ್ ನೋಂದಣಿ ಎಂದು ಹೇಳುವ ಕಂದಾಯ ಸಚಿವರು ಮತ್ತು ನೋಂದಣಿ ಮತ್ತು ಮುದ್ರಾಂಕ ಇಲಾಖೆಯವರು ದಸ್ತಾವೇಜು ತಯಾರಿಸಿದ ಪತ್ರವನ್ನು ಅಪ್ ಲೋಡು ಮಾಡಿದ ನಂತರವೇ ರಿಜಿಸ್ಟರ್ ಆಗುತ್ತದೆ. ಹಾಗಾದರೆ ಪೇಪರ್‌ಲೆಸ್ ನೋಂದಣಿ ಹೇಗಾಗುತ್ತದೆ.
> ● **ಬಿ.ವಿ. ಶಿವಾನಂದ** ಜಿಲ್ಲಾ ಪ್ರಧಾನ ಕಾರ್ಯದರ್ಶಿ

11ರಂದು ಜಿಲ್ಲಾ ಪತ್ರ ಬರಹಗಾರರ ಸಂಘದಿಂದ ಪ್ರತಿಭಟನೆ, ಬೈಕ್ ರ್‍ಯಾಲಿ



ಪ್ರತಿಭಟನಾ ಮೆರವಣಿಗೆ ಕುರಿತು ಶಿವಾನಂದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

● **ಕನ್ನಡಪ್ರಭ ವಾರ್ತೆ** ದಾವಣಗೆರೆ

ಸಾರ್ವಜನಿಕರಿಗೆ ಮಾಹಿತಿ ನೀಡದೇ ಕಂದಾಯ ಸಚಿವರು, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೆಲವೇ ಕೆಲವು ಅಧಿಕಾರಿಗಳು ಏಕಾಏಕಿ ಪೇಪರ್‌ಲೆಸ್ ನೋಂದಣಿ ಕಾರ್ಯ ಪ್ರಾರಂಭಿಸಿದ್ದು, ಇದನ್ನು ಖಂಡಿಸಿ ಮೇ 11ರಂದು ದಾವಣಗೆರೆ ಜಿಲ್ಲಾ ಪತ್ರ ಬರಹಗಾರರ ಸಂಘದಿಂದ ಪ್ರತಿಭಟನಾ ಮೆರವಣಿಗೆ, ಬೈಕ್ ರ್‍ಯಾಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ವಿ.ಶಿವಾನಂದ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೇಪರ್‌ಲೆಸ್ ನೋಂದಣಿ ಕಾರ್ಯವನ್ನು ವಿರೋಧಿಸಿ, ಅಂದು ಬೆಳಗ್ಗೆ 10 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದ ಅಂಬೇಡ್ಕರ್‌ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಿ, ಪೇಪರ್‌ಲೆಸ್ ನೋಂದಣಿಯನ್ನು ಖಂಡಿಸಿ, ರಾಜ್ಯ ಸರ್ಕಾರದ ಕಂದಾಯ ಸಚಿವರ ವಿರುದ್ಧ ಬೈಕ್ ರ್‌ಯಾಲಿ ಮೂಲಕ ಪ್ರತಿಭಟನಾ ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಂಡಿರುತ್ತೇವೆ. ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಮುಖಾಂತರ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿ, ಪೇಪರ್‌ಲೆಸ್ ನೋಂದಣಿ ಸ್ಥಗಿತಗೊಳಿಸಲು ಒತ್ತಾಯಿಸುತ್ತೇವೆ ಎಂದು ಹೇಳಿದರು.

ಸಹಿ ಹಾಕುವ ವ್ಯವಸ್ಥೆ ಇರುವುದಿಲ್ಲ: ಕರ್ನಾಟಕ ಸರ್ಕಾರದ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರು ಇತ್ತೀಚೆಗೆ ಚಾಮರಾಜ ನಗರ ಜಿಲ್ಲೆಯ ಯಳಂದೂರು ಗ್ರಾಮದಲ್ಲಿ ಪೇಪರ್‌ಲೆಸ್ ಎಂಬ ನಾಮಾಂಕಿತ ದಡಿಯಲ್ಲಿ ನೋಂದಣಿ ಕಾರ್ಯಕ್ಕೆ ಚಾಲನೆ ನೀಡಿರುತ್ತಾರೆ. ಪೇಪರ್‌ಲೆಸ್ ನೋಂದಣಿಯಲ್ಲಿ ನೋಂದಣಿ ಆಗುವ ದಸ್ತಾವೇಜಿನಲ್ಲಿ ಮಾರಾಟಗಾರರು, ಖರೀದಿದಾರರ ಮತ್ತು ಸಾಕ್ಷಿದಾರರ ಸಹಿ ಹಾಕುವ ವ್ಯವಸ್ಥೆ ಇರುವುದಿಲ್ಲ ಎಂದು ಹೇಳಿದರು.

ಪೇಪರ್‌ಲೆಸ್ ನೋಂದಣಿ ಹೇಗಾಗುತ್ತದೆ?: ಈ ಹಿಂದಿನಂತೆ ದಸ್ತಾವೇಜನ್ನು ತಯಾರಿಸಿ, ಕಾವೇರಿ-2.0 ನಲ್ಲಿ ಅಪ್ ಲೋಡು ಮಾಡಲೇಬೇಕು. ಅನಂತರ ವಸ್ತಾವೇಜಿನ ಮಾರಾಟಗಾರರು, ಖರೀದಿದಾರರ ಮತ್ತು ಸಾಕ್ಷಿದಾರರಿಂದ ಒಟಿಪಿ ಯನ್ನು ದಸ್ತಾವೇಜು ಬರಹಗಾರರು ಪಡೆದು, ಮಾರಾಟಗಾರರು, ಖರೀದಿದಾರರ ಮತ್ತು ಸಾಕ್ಷಿಗಳ ಸಹಿ ಇಲ್ಲದಂತೆ ಪಬ್ಲಿಕ್ ಲಾಗಿನ್‌ನಲ್ಲಿ ಅಪ್‌ಲೋಡು ಮಾಡಬೇಕಾಗಿರುತ್ತದೆ. ಅನಂತರ ಸಬ್ ರಿಜಿಸ್ಟ್ರಾರ್‌ಕಚೇರಿಯಲ್ಲಿ ಪುನಃ ಒಟಿಪಿ ಪಡೆದು. ಫೋಟೋ ಮತ್ತು ಹೆಬ್ಬೆಟ್ಟು ಪಡೆದು ನಂತರ ದಸ್ತಾವೇಜು ನೋಂದಣಿಯಾಗುತ್ತದೆ. ಆದರೆ ಪೇಪರ್‌ಲೆಸ್ ನೋಂದಣಿ ಎಂದು ಹೇಳುವ ಕಂದಾಯ ಸಚಿವರು ಮತ್ತು ನೋಂದಣಿ ಮತ್ತು ಮುದ್ರಾಂಕ ಇಲಾಖೆಯವರು ದಸ್ತಾವೇಜು ತಯಾರಿಸಿದ ಪತ್ರವನ್ನು ಅಪ್ ಲೋಡು ಮಾಡಿದ ನಂತರವೇ ರಿಜಿಸ್ಟರ್ ಆಗುತ್ತದೆ. ಹಾಗಾದರೆ ಪೇಪರ್‌ಲೆಸ್ ನೋಂದಣಿ ಹೇಗಾಗುತ್ತದೆ ಎಂದು ಪ್ರಶ್ನಿಸಿದರು.

ಇದರಲ್ಲಿ ಮಾರಾಟಗಾರರ, ಖರೀದಿದಾರರ, ಸಾಕ್ಷಿದಾರರ, ಸಬ್ ರಿಜಿಸ್ಟ್ರಾರ್ ರವರ ಡಿಎಸ್‌ಸಿ, ಇ-ಸೈನ್ ಇದ್ದರೆ ಇದರಲ್ಲಿ ದಸ್ತಾವೇಜು ಬರಹಗಾರರ ಡಿಎಸ್‌ಸಿ, ಇ-ಸೈನ್ ಇರುವುದಿಲ್ಲ. ಈ ರೀತಿ ಯಾರ ಸಹಿ ಇಲ್ಲದೇ ನೋಂದಣಿಯಾದ ಪತ್ರವನ್ನು ಮುಂದೆ ತೊಂದರೆಯಾಗಿ ಕೋರ್ಟಿನಲ್ಲಿ ಇದರ ಸತ್ಯಾಸತ್ಯತೆ ಬಗ್ಗೆ ಪರಿಶೀಲನೆಯಲ್ಲಿ ತೊಂದರೆ ಆಗುತ್ತದೆ. ಕೋರ್ಟಿನಲ್ಲಿ ಪತ್ರದ ಬಗ್ಗೆ ಹಲವಾರು ಪ್ರಶ್ನೆಗಳು ಎದುರಾಗುತ್ತವೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯಾಧ್ಯಕ್ಷ ಡಿ.ಕೆ.ಸಂಗಮೇಶ ಎಲಿಗಾರ್, ಎಸ್. ರಾಜಶೇಖರ, ಡಿ.ಆರ್.ಗಿರಿರಾಜ, ವಿ.ಇ.ಧರ್ಮರಾಜ್, ಕೆ.ಹನುಮಂತಪ್ಪ, ಎಸ್. ರಾಜಶೇಖರ, ಬಿ.ಶಿವರಾಜ್, ವೀರಣ್ಣ ಇತರರು ಇದ್ದರು.


‘ಸಿದ್ದರಾಮಯ್ಯ ನಾಯಕತ್ವ, ಶಾಮನೂರು ಕುಟುಂಬದ ಅಭಿವೃದ್ಧಿ ಕಾರ್ಯಕ್ಕೆ ಮತದಾರರ ಮೆಚ್ಚುಗೆ’

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ್ ಅವರ ಗೆಲುವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವ ಹಾಗೂ ಕ್ಷೇತ್ರದಲ್ಲಿ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಹಾಗೂ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳು ಪ್ರಮುಖ ಕಾರಣವಾಗಿವೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.



ಉತ್ತಮ, ಜನಪರ, ಪ್ರಾಮಾಣಿಕ ಹಾಗೂ ದಕ್ಷ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ಅವರ ನಾಯಕತ್ವದ ಮೇಲೆ ಮತದಾರರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಜೊತೆಗೆ ದಶಕಗಳಿಂದ ಕ್ಷೇತ್ರದಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳನ್ನು ಜನರು ಮೆಚ್ಚಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರತಿಪಕ್ಷಗಳು ಎಷ್ಟೇ ರಾಜಕೀಯ ಗಿಮಿಕ್ ನಡೆಸಿದರೂ ಮತದಾರರು ಕಾಂಗ್ರೆಸ್ ಪಕ್ಷ ಹಾಗೂ ಸಿದ್ದರಾಮಯ್ಯ ಅವರ ಪರ ಸ್ಪಷ್ಟ ಒಲವು ತೋರಿದ್ದಾರೆ. ನಮ್ಮ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಹಾಗೂ ಮಾತೆಯರ ಆಶೀರ್ವಾದವೇ ಇಂದು ಶ್ರೀರಕ್ಷೆಯಾಗಿ ನಮ್ಮ ಅಭ್ಯರ್ಥಿ ಸಮರ್ಥ್ ಶಾಮನೂರು ಅವರ ಗೆಲುವಿಗೆ ಕಾರಣವಾಗಿದೆ. ಈ ಗೆಲುವು ಕಾಂಗ್ರೆಸ್ ಪಕ್ಷದ ಜನಪರ ಯೋಜನೆಗಳು ಮತ್ತು ಸ್ಥಳೀಯ ನಾಯಕತ್ವದ ಮೇಲಿನ ಜನರ ನಂಬಿಕೆ ಮತ್ತೊಮ್ಮೆ ದೃಢಪಡಿಸಿದೆ ಎಂದು ಕೆ.ಎಸ್. ಬಸವಂತಪ್ಪ ಹೇಳಿದರು.



ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಇಂಟಕ್, ಅಸಂಘಟಿತ ಕಾರ್ಮಿಕರ ಸಂಘದಿಂದ ಆಯೋಜಿಸಿದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ದಿನೇಶ ಕೆ. ಶೆಟ್ಟಿ ಉದ್ಘಾಟಿಸಿದರು. ಪಕ್ಷದ ಇಂಟಕ್ ಅಧ್ಯಕ್ಷ ಮಂಜುನಾಥ, ಅಸಂಘಟಿತ ಕಾರ್ಮಿಕರ ವಿಭಾಗದ ಅಧ್ಯಕ್ಷ ನಂಜಾನಾಯ್ಕ, ಎ.ನಾಗರಾಜ, ಹನುಮಂತಪ್ಪ ಇತರರು ಇದ್ದರು.

ಬಿಎಸ್‌ವೈ 5 ದಶಕದ ಐತಿಹಾಸಿಕ ಕಾರ್ಯಕ್ರಮ: ರಾಘವೇಂದ್ರ

ಸ್ಟಾಲಿನ್ ತನ್ನ ಬ್ರದರ್ ಅಂದ ರಾಗಾ ತಮಿಳುನಾಡಲ್ಲಿ ಏನು ಮಾಡ್ತಿದ್ದಾರೆ?

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಹಿಂದುತ್ವದ ವಿಚಾರವನ್ನು ಜನರಿಗೆ ಮುಟ್ಟಿಸಿ, ಯಡಿಯೂರಪ್ಪ ಜನರ ಮನ ಗೆದ್ದಿದ್ದರು. ಬಗರ್‌ಹುಕುಂ ಹೋರಾಟದ ಮೂಲಕ ದಲಿತರ ಮನ ಗೆದ್ದಿದ್ದರು. 50 ವರ್ಷಗಳ ರಾಜಕೀಯ ಜೀವನದ ಅಭಿಮಾನೋತ್ಸವ ಕಾರ್ಯಕ್ರಮವನ್ನು ಮೇ9ಕ್ಕೆ ಚಿತ್ರದುರ್ಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ತಿಳಿಸಿದರು.

ನಗರದ ಹೊರವಲಯದ ಅಪೂರ್ವ ರೆಸಾರ್ಟ್‌ನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿತ್ರದುರ್ಗದ ಅಭಿನಂದನೋತ್ಸವಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗಮಿಸಲಿದ್ದಾರೆ. ರಾಜ್ಯದ ವಿವಿಧೆಡೆಯಿಂದ ಸುಮಾರು 10 ಲಕ್ಷಕ್ಕೂ ಅಧಿಕ ಜನರು ಸೇರುವ ಐತಿಹಾಸಿಕ ಕಾರ್ಯಕ್ರಮ ಇದಾಗಲಿದೆ ಎಂದರು.

ಒಂದೇ ವೇದಿಕೆಯಲ್ಲಿ ಎಲ್ಲ ಸ್ವಾಮೀಜಿಗಳನ್ನು ನೋಡುವ ಅವಕಾಶ ಸಿಗಲಿದೆ. ಬಿಜೆಪಿ ಚೌಕಟ್ಟಿನಲ್ಲಿ ಸ್ವಂತ ಸಂಘಟನೆ ಕಟ್ಟಿರುವುದು ವಿಶೇಷ. ಶನಿವಾರದ ಕಾರ್ಯಕ್ರಮದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಬೇಕು. ರಾಜಕಾರಣದಲ್ಲಿ ಯಾವುದೂ ಶಾಶ್ವತವಲ್ಲ. ಸ್ಟಾಲಿನ್ ತನ್ನ ಬ್ರದರ್ ಅಂದಿದ್ದ ರಾಹುಲ್ ಗಾಂಧಿ ಈಗ ತಮಿಳುನಾಡಿನಲ್ಲಿ ಏನು ಮಾಡುತ್ತಿದ್ದಾರೆ ಎಂದು ಬಿಎಸ್‌ವೈಗೆ ಸ್ಥಾನದಿಂದ ಕೆಳಗಿಳಿಸಿದವರೆ ಉತ್ಸವ ಮಾಡುತ್ತಿದ್ದಾರೆಂದ ಸಚಿವ ಸತೀಶ ಜಾರಕಿಹೊಳಿ ಹೇಳಿಕೆಗೆ ಬಿ.ವೈ. ರಾಘವೇಂದ್ರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ರಾಹುಲ್ ಗಾಂಧಿ ನಾಯಕತ್ವದ ಕಾಂಗ್ರೆಸ್ ಪಕ್ಷದ ಶಾಸಕರು ಈಗ ಟಿವಿಕೆಗೆ ಬೆಂಬಲ ನೀಡುತ್ತಿದ್ದಾರೆ. ರಾಜಕೀಯ ಹೇಳಿಕೆಗಳಿಗೆ ಅರ್ಥವಿಲ್ಲ. ಸಾಧನೆಯ ಬೆಟ್ಟವನ್ನು ಹತ್ತುವಂತಹ ಕೆಲಸವನ್ನು ಯಡಿಯೂರಪ್ಪ ತಮ್ಮ ಐದು ದಶಕಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಮಾಡಿದ್ದಾರೆ. ಅಂತಹ ಹೋರಾಟಗಾರ, ಜನಪರ ನಾಯಕನಿಗೆ ಎಲ್ಲರೂ ಸೇರಿ, ಅಭಿನಂದನೋತ್ಸವದ ಮೂಲಕ ಗೌರವಿಸುತ್ತಿದ್ದಾರೆ ಎಂದು ಬಿ.ವೈ. ರಾಘವೇಂದ್ರ ತಿಳಿಸಿದರು.



ದಾವಣಗೆರೆ ಹೊರ ವಲಯದ ಅಪೂರ್ವ ರೆಸಾರ್ಟ್‌ಗೆ ಶುಕ್ರವಾರ ಆಗಮಿಸಿದ ಮಾಜಿ ಮುಖ್ಯಮಂತ್ರಿ, ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರನ್ನು ಸನ್ಮಾನಿಸಿದ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು.

ಬಿಎಸ್‌ವೈಗೆ ಅಜಾತಶತ್ರು, ಸಮಂಜಸ ಅನಿಸಲ್ಲ

ಸಿಟ್ಟು ಇದ್ದರೆ ಒಂದು ರೊಟ್ಟಿ ಸಿಗುತ್ತದೆಂಬಂತೆ ಬಂದವರು ಯಡಿಯೂರಪ್ಪ. ಎಲ್ಲಾ ಬಂಡೆಕಲ್ಲುಗಳನ್ನು ದಾಟಿ ಬಂದ, ಎಲ್ಲಾ ಜಾತಿ, ಜನಾಂಗದವರ ಕಲ್ಯಾಣಕ್ಕೆ ದುಡಿದವರು. ದಕ್ಷಿಣ ಭಾರತದಲ್ಲಿ ಹಿಂದುತ್ವವನ್ನು ಬೆಳೆಸಿದ ಯಡಿಯೂರಪ್ಪ ಹತ್ತಾರು ಅಡೆತಡೆಗಳ ನಡುವೆಯೇ ಹೋರಾಟ ಮಾಡುತ್ತಲೇ ಮೇಲೆ ಬಂದವರು. ಅವರಿಗೆ ಅಜಾತಶತ್ರುವೆಂದರೆ ಸಮಂಜಸ ಅನಿಸುವುದಿಲ್ಲ. ಪಾಪ ಯಡಿಯೂರಪ್ಪನವರ ನಕ್ಷತ್ರದಲ್ಲಿ ಅವರಿಗೆ ಇರುವಷ್ಟು ವಿರೋಧ ಯಾರಿಗೂ ಇಲ್ಲ. ಎಲ್ಲ ಬಂಡೆಕಲ್ಲುಗಳನ್ನೂ ಎದುರಿಸಿದರು. ಭಿನ್ನಮತ ಎನ್ನುವುದು ಜೊತೆ ಜೊತೆಗೆ ಬಂದಿತು. ಸಂಘಟನೆಗಾಗಿ ಯಡಿಯೂರಪ್ಪನವರು ಸಿಟ್ಟು ಮಾಡುತ್ತಿದ್ದರೆ ಹೊರತು, ತಮ್ಮ ಸ್ವಾರ್ಥಕ್ಕಾಗಿ ಎಂದಿಗೂ ಸಿಟ್ಟನ್ನು ಮಾಡಲಿಲ್ಲ ಎಂದು ಬಿ.ವೈ.ರಾಘವೇಂದ್ರ ಹೇಳಿದರು.

10ಕ್ಕೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ

ದಾವಣಗೆರೆ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಮೇ 10ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಆಚರಿಸಲಾಗುತ್ತಿದೆ. ಎಲ್ಲ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಕಾಂಗ್ರೆಸ್ ಅಭ್ಯರ್ಥಿ, ಸಚಿವ ಮಲ್ಲಿಕಾರ್ಜುನ್ ಪುತ್ರರಾದ ಸಮರ್ಥ್ ಎಂ. ಶಾಮನೂರು ಅವರು ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹಮದ್ ಅವರನ್ನು ಶುಕ್ರವಾರ ಭೇಟಿಯಾಗಿ ಸಮಾಲೋಚನೆ ನಡೆಸಿದರು. ಕೆಪಿಸಿಸಿ ಉಪಾಧ್ಯಕ್ಷ, ಬಿಎಂಟಿಸಿ ಅಧ್ಯಕ್ಷ ವಿ.ಎಸ್. ಆರಾಧ್ಯ, ಬಾಲರಾಜ್, ಇಬ್ರಾಹಿಂ ಖಲೀಲ್, ಸಯ್ಯದ್ ಖಾಲಿದ್ ಇದ್ದರು.

'ಕಾರ್ಮಿಕರ ಹಕ್ಕುಗಳಿಗೆ ಕಾಯ್ದೆ ರೂಪಿಸಿದ್ದೇ ಕಾಂಗ್ರೆಸ್'

ದಾವಣಗೆರೆ: ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪಕ್ಷ ಇಂಟಕ್ ಮತ್ತು ಅಸಂಘಟಿತ ಕಾರ್ಮಿಕರ ಸಂಘದ ವತಿಯಿಂದ ಶುಕ್ರವಾರ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಮಿಕರ ದಿನ ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಾರ್ಮಿಕರ ಹಕ್ಕುಗಳಿಗೆ ಕಾಯ್ದೆ ರೂಪಿಸಿದ್ದೆ ಕಾಂಗ್ರೆಸ್ ಪಕ್ಷವಾಗಿದೆ. ಇತ್ತೀಚಿನ ದಿನಗಳಲ್ಲಿ ಬಿಜೆಪಿ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷದ ಇಂಟಕ್ ಅಧ್ಯಕ್ಷ ಮಂಜುನಾಥ, ಅಸಂಘಟಿತ ಕಾರ್ಮಿಕರ ವಿಭಾಗದ ಅಧ್ಯಕ್ಷ ನಂಜಾನಾಯ್ಕ, ಎ.ನಾಗರಾಜ, ಹನುಮಂತಪ್ಪ, ಶಿವಕುಮಾರ, ಮಂಜಮ್ಮ, ಸಲ್ಮಾಬಾನು, ಕವಿತಾ ಚಂದ್ರಶೇಖರ, ಹರೀಶ್, ಡೋಲಿ ಚಂದ್ರು, ಕೊಡಪಾನ ದಾದಾಪೀರ್ ಮತ್ತಿತರರಿದ್ದರು. ಇದೇ ವೇಳೆ ಹಿರಿಯ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖವಾದ ಸಮಾನತೆ, ನ್ಯಾಯ ಮತ್ತು ವೈಜ್ಞಾನಿಕತೆಯೇ ನಿಜವಾದ ಅಂಬೇಡ್ಕರ್‌ವಾದ. ಯಾರು ಯಾವ ಜಾತಿ, ಧರ್ಮ, ಲಿಂಗ ಅಥವಾ ಊರಲ್ಲಿ ಹುಟ್ಟ ಬೇಕೆಂಬುದನ್ನು ಆಯ್ಕೆ ಮಾಡಿಕೊಂಡು, ಹುಟ್ಟುವುದಿಲ್ಲ. ಆದರೆ, ಹುಟ್ಟಿದ ನಂತರ ಸಮಾನತಾವಾದಿಗಳಾಗಿ ಬದುಕುವುದು ನಮ್ಮ ಆಯ್ಕೆಯಾಗಿದೆ. .

• **ಚೇತನ್ ಅಹಿಂಸಾ** ಸಾಮಾಜಿಕ ಹೋರಾಟಗಾರ

ನಮ್ಮ ಹೋರಾಟ ಯಾವುದೇ ಜಾತಿ, ಧರ್ಮದ ವಿರುದ್ಧವಲ್ಲ: ಚೇತನ್ ಅಹಿಂಸಾ

ಅನ್ಯಾಯ ವ್ಯವಸ್ಥೆ ವಿರುದ್ಧ ಹೋರಾಟವಾಗಲಿ | ದಾವಣಗೆರೆಯಲ್ಲಿ ಮಹಾನಾಯಕ ಡಾ.ಅಂಬೇಡ್ಕರ್ ಸೇನೆಯಿಂದ ಸಂವಿಧಾನಶಿಲ್ಪಿ ಜಯಂತಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ನಮ್ಮ ಹೋರಾಟ ಯಾವುದೇ ಜಾತಿ ಅಥವಾ ಧರ್ಮದ ವಿರುದ್ಧವಲ್ಲ. ಅಸಮಾನತೆ ಮತ್ತು ಅನ್ಯಾಯದಿಂದ ಕೂಡಿದ ವ್ಯವಸ್ಥೆ ವಿರುದ್ಧ ನಮ್ಮ ಹೋರಾಟವಾಗಬೇಕು ಎಂದು ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಹೇಳಿದರು.

ನಗರದಲ್ಲಿ ಶುಕ್ರವಾರ ಮಹಾನಾಯಕ ಡಾ. ಬಿ.ಆರ್. ಅಂಬೇಡ್ಕರ್‌ಸೇನೆಯಿಂದ ಹಮ್ಮಿಕೊಂಡಿದ್ದ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಜಯಂತಿಕಾರ್ಯಕ್ರಮವನ್ನು ಬಾಬಾ ಸಾಹೇಬರ ಪುತ್ಥಳಿಗೆ ಮಾಲಾರ್ಪಣೆ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಯಥಾಸ್ಥಿತಿ ವ್ಯವಸ್ಥೆಯೇ ದೊಡ್ಡ ಅನ್ಯಾಯವಾಗಿದ್ದು, ಕೆಳಮಟ್ಟದ ಜನರನ್ನು ಮೇಲಕ್ಕೆತ್ತುವ ಮೂಲಕ ಸಮಸಮಾಜ ನಿರ್ಮಿಸಬೇಕಿದೆ ಎಂದರು.

ಸಮಾನತೆ, ನ್ಯಾಯ, ವೈಜ್ಞಾನಿಕತೆ ಮತ್ತು ಸಂವಿಧಾನದ ಮೌಲ್ಯ ಅಳವಡಿಸಿಕೊಂಡವರು ಯಾರೇ ಆಗಿದ್ದರೂ ಅಂತಹವರು ನಮ್ಮವರೆಂಬ ಭಾವನೆ ಮೂಡಬೇಕು. ಈ ಹೋರಾಟ ಒಂದು ಸಮುದಾಯಕ್ಕೆ ಸೀಮಿತವಾಗದೆ, 7 ಕೋಟಿ ಕನ್ನಡಿಗರ ಸಿದ್ಧಾಂತದ ಹೋರಾಟವಾಗಬೇಕು.



ದಾವಣಗೆರೆಯಲ್ಲಿ ಶುಕ್ರವಾರ ಮಹಾನಾಯಕ ಡಾ. ಬಿ.ಆರ್. ಅಂಬೇಡ್ಕರ್‌ಸೇನೆಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತಿಯಲ್ಲಿ ಚೇತನ್ ಅಹಿಂಸಾ, ಮೈಲಾರಪ್ಪ, ಚನ್ನಮ್ಮ ಆವರಗೆರೆ ಇತರರು ಪಾಲ್ಗೊಂಡರು.

ನಾವು ಬಲ ಪಂಥೀಯರೂ ಅಲ್ಲ, ಎಡ ಪಂಥದವರೂ ಅಲ್ಲ, ಮನುವಾದ ಮಧ್ಯಪಂಥವೂ ಅಲ್ಲ. ನಮ್ಮದೇ ಆದ ಅಂಬೇಡ್ಕರ್, ಪೆರಿಯಾರ್, ಕಾನ್ಶೀರಾಂ ಅವರ ಸತ್ಯಪಂಥದ ಚಿಂತನೆಗಳ ಆಧಾರದಲ್ಲಿ ಸಮಾಜ ಕಟ್ಟಿದಾಗ ಮಾತ್ರ ರಾಜ್ಯದಲ್ಲಿ ನಿಜವಾದ ಸಮಾನತೆಯ ಆಡಳಿತ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖವಾದ ಸಮಾನತೆ, ನ್ಯಾಯ ಮತ್ತು ವೈಜ್ಞಾನಿಕತೆಯೇ ನಿಜವಾದ ಅಂಬೇಡ್ಕರ್‌ವಾದ. ಯಾರು ಯಾವ ಜಾತಿ, ಧರ್ಮ, ಲಿಂಗ ಅಥವಾ ಊರಲ್ಲಿ ಹುಟ್ಟ ಬೇಕೆಂಬುದನ್ನು ಆಯ್ಕೆ ಮಾಡಿಕೊಂಡು, ಹುಟ್ಟುವುದಿಲ್ಲ. ಆದರೆ, ಹುಟ್ಟಿದ ನಂತರ ಸಮಾನತಾವಾದಿಗಳಾಗಿ ಬದುಕುವುದು ನಮ್ಮ ಆಯ್ಕೆಯಾಗಿದೆ. ಸಮಾಜಕ್ಕೆ ವಾಪಸ್ ಕೊಡಬೇಕೆಂಬ ಮನೋಭಾವವೇ ಬದಲಾವಣೆಯ ಬೀಜ. ಬಾಬಾ ಸಾಹೇಬರು ಹೇಳಿದ ಶಿಕ್ಷಣ, ಚಳವಳಿ ಮತ್ತು ಸಂಘಟನೆಯ ಸಂದೇಶ ಕೇವಲ ಘೋಷಣೆ ಅಲ್ಲ; ಅದು ದೇಶ ನಿರ್ಮಾಣದ ದಿಕ್ಕು ಎಂದು ಅವರು ತಿಳಿಸಿದರು.

ಅಂಬೇಡ್ಕರ್ ಅವರನ್ನು ಕೇವಲ ಸಂವಿಧಾನ ಶಿಲ್ಪಿ ಅಥವಾ ಭಾರತ ರತ್ನವೆಂದು ಸೀಮಿತ ಪರಿಧಿಯಲ್ಲಿ ನೋಡದೇ, ಆ ಮಹನೀಯರ ಸಮಾನತಾವಾದಿ ಚಿಂತನೆ ಮತ್ತು ಕ್ರಾಂತಿಕಾರಿ ದೃಷ್ಟಿಕೋನ ಅರ್ಥ ಮಾಡಿಕೊಳ್ಳಬೇಕು. ಇತಿಹಾಸದಲ್ಲಿ ದೊಡ್ಡ ಬದಲಾವಣೆಗಳು ಲಕ್ಷಾಂತರ ಜನರ ಗುಂಪಿನಿಂದ ಮಾತ್ರ ಆಗಿಲ್ಲ. ಕೆಲವರು ದೃಢವಾಗಿ ನಿಂತು ದಿಕ್ಕು ತೋರಿಸಿದಾಗಲೇ ಪರಿವರ್ತನೆಯಾಗಿದೆ. ನಾವು ನದಿಯಲ್ಲಿ ಕೊಚ್ಚಿ ಹೋಗುವ ಮಣ್ಣಾಗಬಾರದು. ನದಿಯ ದಿಕ್ಕು ಬದಲಿಸುವ ಬಂಡೆಗಳಾಗಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ. ಹಾಗಾಗಿ, ಸಮಾಜ ಪರಿವರ್ತನೆಗೆ ಎಲ್ಲರೂ ಕೈ ಜೋಡಿಸಬೇಕು ಎಂದರು.

ಬಾಬಾಸಾಹೇಬ್ ಅಂಬೇಡ್ಕರ್‌ವಾದದ ಅರ್ಥವೆಂದರೆ, ಅಂಬೇಡ್ಕರ್ ಫೋಟೋ, ಪುತ್ಥಳಿ ಅಥವಾ ದೊಡ್ಡ ಯೋಜನೆಗಳಿಂದ ಅಂಬೇಡ್ಕರ್‌ವಾದ ಬರುವುದಿಲ್ಲ. ಸಮಸಮಾಜ ನಿರ್ಮಾಣವೇ ನಿಜವಾದ ಅಂಬೇಡ್ಕರ್‌ವಾದ. ಇದನ್ನು ನಾವು ಅರಿಯಬೇಕಿದೆ. ನಾಯಕರ ಆರಾಧನೆ ಮತ್ತು ವ್ಯಕ್ತಿ ಆರಾಧನೆಯನ್ನು ಬಾಬಾ ಸಾಹೇಬರು ಒಪ್ಪಲಿಲ್ಲ. ಅಂತಹವರನ್ನು ಪೂಜಿಸುವುದಕ್ಕಿಂತ ಓದಬೇಕು, ಬಬಾ ಸಾಹೇಬರು ಕಂಡ ಕನಸನ್ನು ಸಾಕಾರಗೊಳಿಸಬೇಕು. ಅದು ಯುವಜನತೆ ಮೇಲಿದೆ. ಇತಿಹಾಸದ ತಪ್ಪುಗಳನ್ನು ಸರಿಪಡಿಸುವುದೇ ನ್ಯಾಯ. ವಂಚಿತರಿಗೆ ಹೆಚ್ಚಿನ ಅವಕಾಶ ಮತ್ತು ಸೌಲಭ್ಯ ದೊರೆಯಬೇಕು, ಸಮಾಜದಲ್ಲಿ ಹೆಚ್ಚಾಗಿ ಪಡೆದವರು ಹೆಚ್ಚಿನ ಹೊಣೆ ಹೊತ್ತು ವಾಪಸ್ ಕೊಡಬೇಕೆಂದರು.

ಸೇನೆ ಜಿಲ್ಲಾಧ್ಯಕ್ಷ ಎನ್.ಡಿ. ಮೈಲಾರಪ್ಪ, ಜಿಲ್ಲಾ ಮಹಿಳಾ ಅಧ್ಯಕ್ಷೆ ಚನ್ನಮ್ಮ ಆವರಗೆರೆ, ನಟ ವಿಜಯ ಜಯ್ಕರ್, ಮುಖಂಡರಾದ ನಾರಾಯಣ ಸ್ವಾಮಿ, ಎಂ. ಸುರೇಶ, ದೇವರಾಜ, ದೇವದಾಸ, ವಿಠಲ್ ಇತರರು ಇದ್ದರು.

11ರಂದು ಬೇಸಿಗೆ ಶಿಬಿರ ಸಮಾರೋಪ

ದಾವಣಗೆರೆ: ನಗರದ ಬಾಲಭವನ ಸೊಸೈಟಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ವತಿಯಿಂದ ಏ.27ರಿಂದ ಮೇ 11 ರವರೆಗೆ ಏರ್ಪಡಿಸಿದ್ದ ಜಿಲ್ಲಾಮಟ್ಟದ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಮೇ 11ರಂದು ಬೆಳಗ್ಗೆ 10.30 ಗಂಟೆಗೆ ಜೆ.ಎಚ್. ಪಟೇಲ್ ಬಡಾವಣೆಯ ಜಿಲ್ಲಾ ಬಾಲಭವನದಲ್ಲಿ ಏರ್ಪಡಿಸಲಾಗಿದೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಜಿಲ್ಲಾ ಬಾಲಭವನ ಸಮಿತಿ ಅಧ್ಯಕ್ಷರಾದ ಗಿತ್ತೆ ಮಾಧವ ವಿಠ್ಠಲ ರಾವ್ ಕಾರ್ಯಕ್ರಮ ಉದ್ಘಾಟಿಸುವರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ರಾಜಾನಾಯ್ಕ, ಇತರರು ಭಾಗವಹಿಸುವರು.

> ಜಗಳೂರು ಕ್ಷೇತ್ರಕ್ಕೆ ಬಿ.ಎಸ್. ಯಡಿಯೂರಪ್ಪ ನೀಡಿರುವ ಕೊಡಿಗೆ ಅಪಾರವಾಗಿದೆ. ಸಿರಿಗೆರೆ ಶ್ರೀಗಳ ಮಾರ್ಗದರ್ಶನದಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜಗಳೂರು ತಾಲೂಕಿನ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಲ್ಪಿಸಿದರು. ಹಾಗೂ ಭದ್ರಾ ಮೇಲ್ದಂಡೆ ಯೋಜನೆ ರೂವಾರಿಯೂ ಆಗಿದ್ದಾರೆ.
>
> • **ಎಸ್.ವಿ. ರಾಮಚಂದ್ರ**, ಮಾಜಿ ಶಾಸಕ, ಜಗಳೂರು.



ಅಭಿಮಾನೋತ್ಸವಕ್ಕೆ 8 ಸಾವಿರ ಜನ: ರಾಮಚಂದ್ರ

200 ಟೀಶರ್ಟ್ ಬಿಡುಗಡೆ | 100ಕ್ಕೂ ಅಧಿಕ ಬಸ್, 50ಕ್ಕೂ ಹೆಚ್ಚು ಟ್ರ್ಯಾಕ್ಸ್ ವ್ಯವಸ್ಥೆ

• **ಕನ್ನಡಪ್ರಭ ವಾರ್ತೆ** ಜಗಳೂರು

ಚಿತ್ರದುರ್ಗ ಶಿವಶರಣ ಮಾದರ ಚನ್ನಯ್ಯ ಗುರುಪೀಠದ ಸಮೀಪ ಮೇ 9ರಂದು ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಜಗಳೂರು ಕ್ಷೇತ್ರದಿಂದ 8 ಸಾವಿರಕ್ಕೂ ಹೆಚ್ಚು ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸಲಿದ್ದಾರೆ. ಈ ಕಾರಣಕ್ಕೆ 100ಕ್ಕೂ ಅಧಿಕ ಬಸ್, 50ಕ್ಕೂ ಅಧಿಕ ಟ್ರ್ಯಾಕ್ಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಶುಕ್ರವಾರ ಸಂಜೆ ಯಡಿಯೂರಪ್ಪ ಭಾವಚಿತ್ರವಿರುವ 2000 ಟೀ ಶರ್ಟ್‌ಗಳ ಬಿಡುಗಡೆಗೊಳಿಸಿ ಮಾತನಾಡಿದರು.

ಜಗಳೂರು ಕ್ಷೇತ್ರಕ್ಕೆ ಬಿ.ಎಸ್. ಯಡಿಯೂರಪ್ಪ ನೀಡಿರುವ ಕೊಡಿಗೆ ಅಪಾರವಾಗಿದೆ. ಸಿರಿಗೆರೆ ಶ್ರೀಗಳ ಮಾರ್ಗದರ್ಶನದಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜಗಳೂರು ತಾಲೂಕಿನ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಲ್ಪಿಸಿದರು. ಹಾಗೂ ಭದ್ರಾ ಮೇಲ್ದಂಡೆ ಯೋಜನೆ ರೂವಾರಿಯೂ ಆಗಿದ್ದಾರೆ. ಅವರ ಋಣ ತೀರಿಸಲು ಆಗುವುದಿಲ್ಲ. ಪಟ್ಟಣದಲ್ಲಿ ಖಾಸಗಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ನಿರ್ಮಾಣ ಮಾಡಲಾಗಿದೆ. ವಾಲ್ಮೀಕಿ ಭವನಗಳು ಸೇರಿ 5 ಬೃಹತ್ ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ ಎಂದರು.



ಜಗಳೂರು ಪಟ್ಟಣದಲ್ಲಿ ಮಾಜಿ ಶಾಸಕ ಎಸ್.ವಿ. ರಾಮಚಂದ್ರ ತಮ್ಮ ನಿವಾಸದಲ್ಲಿ ಶುಕ್ರವಾರ ಯಡಿಯೂರಪ್ಪ ಭಾವಚಿತ್ರವಿರುವ 2000 ಟೀ ಶರ್ಟ್‌ಗಳನ್ನು ಬಿಡುಗಡೆಗೊಳಿಸಿದರು.

ಸಂಪುಟ ಸ್ಥಾನಮಾನ ನೀಡಿ ನನ್ನನ್ನು ಉತ್ತುಂಗಕ್ಕೆ ಕೊಂಡ್ಯೊಯ್ದು, ಹಟ್ಟಿ ಚಿನ್ನದ ಗಣಿ ನಿಗಮ ಅಧ್ಯಕ್ಷರಾಗಿ ಮಾಡಿ ನೂರಾರು ಕೋಟಿ ಅನುದಾನ ಕೊಟ್ಟರು. ವಾಲ್ಮೀಕಿ ಅಭಿವೃದ್ಧಿ ನಿಗಮ ಅಧ್ಯಕ್ಷರಾಗಿ ಮಾಡಿದ್ದರು. ಇದೆಲ್ಲವೂ ಬಿಎಸ್‌ವೈ ಕೊಡುಗೆ. ಆದ್ದರಿಂದ ಅಭಿಮಾನಿಗಳು, ಕಾರ್ಯಕರ್ತರು ಸೇರಿ ಬಿಎಸ್‌ವೈ ಅಭಿಮಾನೋತ್ಸವ ಮಾಡಲು ಮುಂದಾಗಿದ್ದೇವೆ ಎಂದರು.

ಶನಿವಾರ ಚಿತ್ರದುರ್ಗದಲ್ಲಿ ಬಿ.ಎಸ್.ವೈ. ಅವರಿಗೆ ಶಕ್ತಿ ತುಂಬಲು ಅದ್ಧೂರಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಾದರ ಚನ್ನಯ್ಯ ಗುರುಪೀಠದ ಸಮೀಪ ಸುಮಾರು 76 ಎಕರೆ ಜಾಗದಲ್ಲಿ ಬೃಹತ್ ಶಾಮಿಯಾನದಡಿ ಕಾರ್ಯಕ್ರಮ ನಡೆಯಲಿದೆ. ರಾಜ್ಯದಿಂದ 10 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಜನರು ಸೇರಲಿದ್ದಾರೆ. ಇಂತಹ ಧೀಮಂತ ನಾಯಕನಿಗೆ ಅಭಿನಂದಿಸಲು ಕಾತುರತೆಯಿಂದ ಕಾಯುತ್ತಿದ್ದಾರೆ. ಇದು ನಮ್ಮ ಕನ್ನಡ ನಾಡಿನ ಹೆಮ್ಮೆಯಾಗಿದೆ ಎಂದರು.

ಬಿಜೆಪಿ ಮಂಡಲ ಅಧ್ಯಕ್ಷ ಎ.ಎಂ. ಮರುಳಾರಾಧ್ಯ, ಮಾಜಿ ಪಟ್ಟಣ ಪಂಚಾಯಿತಿ ಸದಸ್ಯ ಬಳೆಗಾರ ರುದ್ರಣ್ಣ, ಓಬಳೇಶ್ ಮತ್ತಿತರರಿದ್ದರು.

ತುಂಗಭದ್ರೆಯಲ್ಲಿ ದೈತ್ಯ ಮೊಸಳೆ ಪ್ರತ್ಯಕ್ಷ: ಜನರ ಆತಂಕ

ದಾವಣಗೆರೆ: ತುಂಗಭದ್ರಾ ನದಿಯಲ್ಲಿ ದೈತ್ಯ ಗಾತ್ರದ ಮೊಸಳೆ ಕಾಣಿಸಿಕೊಂಡ ಹಿನ್ನೆಲೆ ನದಿ ಪಾತ್ರದ ಗ್ರಾಮಸ್ಥರು, ರೈತರು ತೀವ್ರ ಆತಂಕಗೊಂಡ ಘಟನೆ ಶುಕ್ರವಾರ ಹೊನ್ನಾಳಿ ತಾಲೂಕಿನಲ್ಲಿ ವರದಿಯಾಗಿದೆ. ಹೊನ್ನಾಳಿ ತಾಲೂಕಿನ ರಾಂಪುರ ಬಳಿ ತುಂಗಭದ್ರಾ ನದಿಯಲ್ಲಿ ಬೃಹತ್ ಮೊಸಳೆ ನದಿಯಿಂದ ದಡಕ್ಕೆ ಬಂದು ಮರಳಿನಲ್ಲಿ ಹೆಜ್ಜೆ ಹಾಕುತ್ತಿರುವ ದೃಶ್ಯ ಗ್ರಾಮಸ್ಥರ ಮೊಬೈಲ್‌ನಲ್ಲಿ ಸೆರೆಯಾಗಿದ್ದು, ದೃಶ್ಯ ವೈರಲ್ ಆಗಿದೆ. ಬೇಸಿಗೆ ದಿನಗಳ ಹಿನ್ನೆಲೆ ಗ್ರಾಮದ ಮಕ್ಕಳು, ಯುವಕರು ಈಜಲು ನದಿಗೆ ಹೋಗುವುದು, ನದಿ ಪಾತ್ರದ ಮಹಿಳೆಯರು, ಮಕ್ಕಳು, ಹಿರಿಯರು ಬಟ್ಟೆ ತೊಳೆಯಲು ಹಾಗೂ ವಾಹನ ತೊಳೆಯಲು ನದಿ ಪಾತ್ರಕ್ಕೆ ಹೋಗುತ್ತಿದ್ದವರು ಈಗ ಮೊಸಳೆ ಸುದ್ದಿಯಿಂದ ತೀವ್ರ ಭಯಭೀತರಾಗಿದ್ದಾರೆ.











